# ಹಿಂದು ವಾಣಿ

ಸಂಪುಟ-10
ಸಂಚಿಕೆ-9
ಮಾರ್ಗಶಿರ-ಪುಷ್ಯ
ಡಿಸೆಂಬರ್ 2011
ಬೆಲೆ ರೂ. 10.00
CPMG/KA/BGS-636/2009-11






ಧಾರವಾಡ ಜಿಲ್ಲಾ ಅಭ್ಯಾಸ ವರ್ಗ
ವರದಿ (ಪುಟ 30)



ಕೋಮು ಮತ್ತು ನಿರ್ದೇಶಿತ
ಹಿಂಸಾಚಾರ ತಡೆ ಮಸೂದೆ
ವಿರುದ್ಧ ಜಾಗೃತಿ ಸಭೆ
ಭದ್ರಾವತಿ
(ಪುಟ 28)



ಸ್ಥಾಪನಾ ದಿನ ಸಂಪಂಗಿ ರಾಮನಗರ ಪ್ರಖಂಡ
ಬೆಂಗಳೂರು (ಇನ್ನೊಂದು ಚಿತ್ರ ರಕ್ಷಾಪುಟ 4)




ಮತ ಪ್ರಚಾರದ ಇನ್ನೊಂದು (ಕು)ತಂತ್ರ
ಸಂಗ್ರಹ: ಮನೋಹರ ವಿ. ಮಾರತಹಳ್ಳಿ




ಬೆಂಗಳೂರಿನಲ್ಲಿ ಪ್ರಾಂತ ಸತ್ಸಂಗ ಬೈಠಕ್



ಅಖಿಲ ಭಾರತ ಸತ್ಸಂಗ ಪ್ರಮುಖ್ ಡಾ. ವಸಂತರಥ್

ಹಿಂದುವಾಣಿ

ಗೌರವ ಸಂಪಾದಕ
**ಟಿ.ಎ.ಪಿ. ಶೆಣೈ**
ಇ-hinduvani@yahoo.com

ಶ್ರೀ ಖರ ನಾಮಸಂವತ್ಸರ
ಮಾರ್ಗಶಿರ-ಪುಷ್ಯ
**ಡಿಸೆಂಬರ್ 2011**

**ಪ್ರಕಾಶಕರು**
**ರಮೇಶ್ ಮ. ಪರಾಂಡೆ**
**ವಿಶ್ವಹಿಂದು ಪರಿಷದ್, ಕರ್ನಾಟಕ**
'ಧರ್ಮಶ್ರೀ', 91, ಶಂಕರಪುರಂ,
ಶಂಕರಮಠ ಸಮಾನಾಂತರ ರಸ್ತೆ
ಬೆಂಗಳೂರು - 560 004
ದೂ. 080-26604641

**ಚಂದಾವಿವರ**
ಬಿಡಿ ಪ್ರತಿ ರೂ. 10/-
ವಾರ್ಷಿಕ ಚಂದಾ ರೂ. 80/-
ದ್ವೈವಾರ್ಷಿಕ ಚಂದಾ ರೂ. 150/-

**ಮುದ್ರಕರು**
ವಿಶ್ವಾಸ್ ಪ್ರಿಂಟ್ಸ್
ಚಾಮರಾಜಪೇಟೆ, ಬೆಂಗಳೂರು
ದೂ. 080-26606088
ಇಮೇಲ್:vishwasprints@yahoo.co.in

**ಹಿಂದುವಾಣಿಗೆ ಚಂದಾದಾರರಾಗಿರಿ**
ಎಂ.ಓ/ಡಿ.ಡಿ.ಗಳನ್ನು
**"ವಿಶ್ವಹಿಂದು ಪರಿಷದ್"**
ಹೆಸರಿನಲ್ಲಿ ಕಳುಹಿಸಬಹುದು

ಹಿಂದುವಾಣಿ E- ಪತ್ರಿಕೆ
ನೋಡಿ :www.vhp.org

## ಸಾರ್ವಕಾಲಿಕ ಸಾರ್ವದೇಶಿಕ ಸಂದೇಶ

ಮಧ್ವರ ಕಾಲ ಇಂದಿಗೆ ಸುಮಾರು 600 ವರ್ಷಗಳ ಹಿಂದೆ. ಅದಕ್ಕೆ ಮುಂಚೆ ದ್ವೈತ ಸಿದ್ಧಾಂತವೇ ಇರಲಿಲ್ಲ. ಸುಮಾರು 900 ವರ್ಷಗಳ ಹಿಂದೆ ರಾಮಾನುಜರು ಸಿಕ್ಕುತ್ತಾರೆ. ಅವರನ್ನು ದಾಟಿದರೆ ವಿಶಿಷ್ಟಾದ್ವೈತ ಇಲ್ಲ. ಸುಮಾರು 1200 ವರ್ಷಗಳು ಹಿಂದಕ್ಕೆ ಹೋದರೆ ಶಂಕರರು ಎದುರಾಗುತ್ತಾರೆ. ಅವರನ್ನೂ ದಾಟಿದರೆ ಅಲ್ಲೆಲ್ಲೂ ಅದ್ವೈತ ಇಲ್ಲ. 1500 ವರ್ಷಗಳು ಹಿಂದಕ್ಕೆ ಹೋದರೆ ಮೊಹಮ್ಮದ್ ಪೈಗಂಬರ್ ಸಾಹೇಬರು ಭೇಟಿಯಾಗುತ್ತಾರೆ. ಅದಕ್ಕೂ ಹಿಂದೆ ಹೋದರೆ ಇಸ್ಲಾಮಿನ ಸುಳಿವಿಲ್ಲ. 2000 ವರ್ಷಗಳು ಹಿಂದಕ್ಕೆ ಹೋದರೆ ಜೀಸಸ್ ಕ್ರೈಸ್ತ ಕಾರ್ನರ್‌ನಲ್ಲಿ ದೊರೆಯುತ್ತದೆ. ಅಲ್ಲಿಂದ ಮುಂದಕ್ಕೆ ಹೋದರೆ ಕ್ರೈಸ್ತ ಮತ ಕಾಣಸಿಗುವುದಿಲ್ಲ. ಹೀಗೆ ಹಿಂದು ಹಿಂದಕ್ಕೆ ಪಯಣಿಸುತ್ತಾ ಹೋದರೆ ಒಂದು ಕಾಲ ಘಟ್ಟದಲ್ಲಿ ನಮಗಿಂದು ತಿಳಿದಿರುವ ಯಾವುದೇ ಮತ ಧರ್ಮಗಳು ಸಿಕ್ಕುವುದಿಲ್ಲ. ಹಾಗಾದರೆ ಅಂದು ಮಾನವ ಸಮಾಜ ಇರಲಿಲ್ಲವೇ? ಸಾಮಾಜಿಕ ವ್ಯವಸ್ಥೆ ಇರಲಿಲ್ಲವೇ? Dos ಮತ್ತು Don'ts ಇವುಗಳನ್ನು ತಿಳಿಹೇಳುವ ನೀತಿ ಸಂಹಿತೆ ಇರಲಿಲ್ಲವೇ? (ಡಾರ್ವಿನ್ನನ ಸಿದ್ಧಾಂತ ಅವನ ಪೂರ್ವಜರಿಗೆ ಹೊಂದಬಹುದೇನೋ ಅದನ್ನು ಇಡೀ ಮನುಕುಲಕ್ಕೆ ಹೊಂದಿಸುವುದು ಅಪ್ಪಟ ಮೂರ್ಖತನ ಮತ್ತು ಅವೈಜ್ಞಾನಿಕ) ಋಗ್ವೇದ ಕನಿಷ್ಠ 10 ಸಾವಿರ ವರುಷಗಳಷ್ಟು ಹಳೆಯದೆಂದು ಎಲ್ಲಾ ಚಾರಿತ್ರಿಕರು ಒಕ್ಕೊರಲಿನಿಂದ ಒಪ್ಪಿದ್ದಾರೆ.

ಅಂದು ಇಡೀ ಜಗತ್ತಿಗೆ ಮಾರ್ಗದರ್ಶನ ಕೊಡಲು ಇದ್ದದ್ದು ವೇದ! ನಂತರ ಬಂದ ಯಾವುದೇ ಮತಧರ್ಮಗಳಲ್ಲಿ ವೇದದ ಭಾಗಗಳು ಮತ್ತು ಪ್ರಭಾವವನ್ನು ನಿಚ್ಚಳವಾಗಿವೆ. ನೋಡಬಹುದು!! ಅದರೊಟ್ಟಿಗೆ ಅನೇಕ ಮಾನವೀಯ ಇತಿಮಿತಿಗಳುಳ್ಳ ಅಂಶಗಳು ಸೇರಿಹೋಗಿವೆ. ವೇದಗಳಿಗೆ ಅನುಕೂಲವಾದ ಭಾಗಗಳನ್ನು ಇಟ್ಟುಕೊಂಡು ವೇದಗಳಿಗೆ ವಿರುದ್ಧವಾದ ಅಂಶಗಳನ್ನು ತೆಗೆದು ಹಾಕಿ ಸ್ವೀಕರಿಸಿದರೆ ಸರ್ವರಿಗೂ ಶಾಂತಿ ಸಮಾಧಾನ, ಆನಂದ. ವೇದಗಳು ಪರಿಶುದ್ಧವಾಗಿವೆ. ಸಾರ್ವಜನಿಕ, ಸಾರ್ವಕಾಲಿಕ, ಸಾರ್ವದೇಶೀಕ, ಸಾರ್ವಭೌಮ ಆಗಿದೆ. ಈ ಬಗ್ಗೆ ಬೇರೊಂದು ಸೂಕ್ತಿಶ್ರೀಯಲ್ಲಿ ವಿಚಾರ ಮಾಡೋಣ.

**- ಸುಧಾಕರ ಶರ್ಮಾ**

6 ದ್ವೈತ ವೇದಾಂತ

ಅಧ್ಯಕ್ಷರ ಮಾತು

14 ಅಖಿಲ ಭಾರತೀಯ ಸತ್ಸಂಗ ಪ್ರಶಿಕ್ಷಣ ವರ್ಗ

20 ಸಂಘಟನಾ ಸೂತ್ರದ ಸುಂದರ ಮಾಹಿತಿ

26 ಹೊಲಿಗೆಯಿಂದ ಹೊಸ ಜೀವನ

33 ತಂದೆ



11 ಹನುಮಾನ್ ಚಾಲೀಸಾ – 15

ಎಂದಿನಂತೆ




1 ಸೂಕ್ತಿಶ್ರೀ – ಸಾರ್ವಕಾಲಿಕ ಸಾರ್ವದೇಶಿಕ ಸಂದೇಶ

3 ಸಂಪಾದಕೀಯ– ಮೂಸೆಯಲ್ಲಿ ಕರಗುತ್ತಿದೆ ಚಿನ್ನ

16 ಕ್ಷೇತ್ರದರ್ಶನ – ಶ್ರೀ ಕುಕ್ಕೆ ಸುಬ್ರಹ್ಮಣ್ಯ

22 ಅಲ್ಲಲ್ಲಿಂದ

28 ವಿಶ್ವಹಿಂದು ವಾರ್ತಾ

35 ಶಬ್ದಶೋಧ 65

32 ನೀವೆಷ್ಟು ಬುದ್ಧಿವಂತರು

36 ಪ್ರಸ್ತುತ – ಹೆಣ್ಣೆಂಬ ಅಭಿಮಾನವಿರಲಿ

ಮುಖಪುಟ

ಸಂತ ಕನಕದಾಸ ಜಯಂತಿ ಉತ್ಸವ (ಲೇಖನ ಪುಟ 9)

# ಮೂಸೆಯಲ್ಲಿ ಕರಗುತ್ತಿದೆ ಚಿನ್ನ

ಕರ್ನಾಟಕದ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶರೊಬ್ಬರು ತಮ್ಮ ವಾಹನವನ್ನು ಒಂದು ಅರ್ಧನಿಮಿಷ ಮುಂದೆ ಒಯ್ದು ವೃತ್ತವೊಂದನ್ನು ಸುತ್ತುಹಾಕಿ ಬರುವುದನ್ನು ತಪ್ಪಿಸಲು; ಸಂಚಾರಿ ಪೋಲೀಸರು ಹಾಕಿದ ತಡೆದಾರಗಳನ್ನು ಕತ್ತರಿಸಿ ಅಕ್ರಮವಾಗಿ ವಾಹನವನ್ನು ನುಗ್ಗಿಸಿದುದು ಚಿತ್ರಸಹಿತ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಅವರು ನ್ಯಾಯಧೀಶರಾಗಿ ನೀಡಿದ ತೀರ್ಪುಗಳಲ್ಲಿ ತುಂಬಿತುಳುಕುತ್ತಿದ್ದ ನೀತಿ ಬೋಧೆಗಳು ಯೇಸುವಿನ ಸಾಮತಿಗಳನ್ನೂ ಮೀರಿಸುವಂತಿದ್ದವು. ನಿವೃತ್ತಿಯ ನಂತರ ಅವರಿಗೆ ಕ್ರೈಸ್ತರು ಮಾತ್ರ ಅನ್ಯಾಯಕ್ಕೊಳಪಡುವವರು ಎಂದು ಅನಿಸಿತು. ಮತಾಂತರದ ಪರವಾಗಿ, ಗೋಹತ್ಯೆಗಾಗಿ, ಅವರು ಹಗಲಿರುಳೂ; ರಾಜ್ಯದ ಪ್ರತಿಪಕ್ಷಗಳ ಮುಖ್ಯಕಾರ್ಯಾಲಯವಾಗಿರುವ ರಾಜಭವನಕ್ಕೆ ಎಡತಾಕಹತ್ತಿದರು. ಇನ್ನೊಬ್ಬರಿದ್ದರು; ಅತಿ ಉಪೇಕ್ಷಿತ ಜನಸಮೂಹದ ಭೂಮಿಯನ್ನು ತನಗೆ ಪರಭಾರೆ ಮಾಡಿಕೊಂಡು ಕೊನೆಗೆ ಮಹಾಭಿಯೋಗದ ಅವಮಾನವನ್ನು ತಪ್ಪಿಸಿಕೊಳ್ಳಲು ಮುಖ್ಯ ನ್ಯಾಯಾಧೀಶರ ಸ್ಥಾನಕ್ಕೆ ರಾಜಿನಾಮೆ ನೀಡಿದರು. ತಮ್ಮನ್ನು ಸಮರ್ಥಿಸಲು ಅವರು ಬಳಸಿದ ವಾದದಲ್ಲಿ ತಾನು ಉಪೇಕ್ಷಿತ ವರ್ಗದವನಾದುದರಿಂದ ತನ್ನ ವಿರುದ್ಧ ಹಿತಾಸಕ್ತರ ವ್ಯೂಹವೊಂದು ಹೂಡಿದ ತಂತ್ರ ಇದು ಎಂದರು. ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಬ್ಬರು ನಿಯಮಗಳಲ್ಲಿ ಅವಕಾಶವಿಲ್ಲದ್ದಿದ್ದರೂ ತನ್ನ ಪತ್ನಿಯ ಪ್ರವಾಸ ವೆಚ್ಚವನ್ನು ಪಡೆದುಕೊಂಡರು. ಆಕ್ಷೇಪಗಳು ಎದ್ದಾಗ, ಮುಂದೆ; ನ್ಯಾಯಾಧೀಶರೆಲ್ಲರೂ ತನ್ನ ದೃಷ್ಟಾಂತವನ್ನು ಕೊಟ್ಟು ತಮ್ಮ ಬಂಧುಗಳ ಖರ್ಚನ್ನು ಪಡೆದುಕೊಳ್ಳಲೆಂಬ ಸದುದ್ದೇಶದಿಂದ ಹಾಗೆ ಮಾಡಿದೆ ಎಂದರು. ದೇಶದ ಬಹುತೇಕ ನ್ಯಾಯಾಧೀಶರು ತಮ್ಮ ಆಸ್ತಿ ಆದಾಯಗಳನ್ನು ಘೋಷಿಸಿದರೂ ಅದನ್ನು ವಿರೋಧಿಸುತ್ತ ಆದಾಯಕರ ಇಲಾಖೆಗೆ ತಾನು ಒಪ್ಪಿಸಿದ ತನ್ನ ಆದಾಯವನ್ನು ಕೂಡಾ ಯಾವ ಕಾರಣಕ್ಕೂ ಬಹಿರಂಗಪಡಿಸಬಾರದೆಂದು ತಾಕೀತು ಮಾಡಿದರು. ಈಚೆಗೆ ನ್ಯಾಯಾಧೀಶರೊಬ್ಬರು ಒಳಗೊಂಡ ಅಪರಾಧ ಪ್ರಕರಣವನ್ನು ಪತ್ರಿಕೆಯೊಂದು ವರದಿ ಮಾಡಿತು. ಆದರೆ ಅಲ್ಲಿ ಅದು ಪ್ರಕಟಿಸಿದ ಭಾವಚಿತ್ರವು ಇನ್ನೊಬ್ಬರು ಸರ್ವೋಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶರದ್ದಾಗಿತ್ತು. ಕೆಂಡಮಂಡಲರಾದ ನ್ಯಾಯಮೂರ್ತಿಗಳು ಪತ್ರಿಕೆಯ ವಿರುದ್ಧ ಮಾನನಷ್ಟ ದಾವೆಯನ್ನು ಹೂಡಿ 100 ಕೋಟಿ ರೂಪಾಯಿಗಳ ಪರಿಹಾರವನ್ನು ಆಗ್ರಹಿಸಿದರು. ಪ್ರಸಂಗವನ್ನು ಸಮಚಿತ್ತದಿಂದ ಕಾಣದೆ ಅವರೇನೋ ಔಚಿತ್ಯವನ್ನು ಮೀರಿ ವರ್ತಿಸಿದರೆಂದರೆ; ಅವರನ್ನು ಸಮರ್ಥಿಸಿದ ಮುಂಬೈ ಉಚ್ಚನ್ಯಾಯಾಲಯವು ಅಷ್ಟೂ ಪರಿಹಾರ ನೀಡುವಂತೆ ತೀರ್ಪು ನೀಡಿತು. ಇನ್ನು ಕಾವಲು ನಾಯಿಗಳಾಗಿ ವರ್ತಿಸಬೇಕಾದ ತನಿಖಾಸಂಸ್ಥೆಗಳಲ್ಲಿ ತೋಳಗಳ ಹಿಂಡೇ ಇರುವುದಂತೂ ಜನಜನಿತವಾಗಿದೆ.

ಈ ಅಪಸವ್ಯಗಳ ನಡುವೆಯೂ ಎಲ್ಲರೂ ಮೆಚ್ಚುವಂತೆ ಇವೆಲ್ಲವೂ ಮನುಷ್ಯ ಪ್ರವೃತ್ತಿಯ ತಾತ್ಕಾಲಿಕ ವಿಕಾರಗಳೆಂಬಂತೆ ನ್ಯಾಯಾಲಯಗಳು ವರ್ತಿಸಿವೆ. ಹಾಗಾಗಿಯೇ ಸಾರ್ವಜನಿಕ

ಸ್ಥಾನದಲ್ಲಿರುವವರು ಉತ್ತರದಾಯಿಗಳೂ ಆಗಿರಬೇಕೆನ್ನುವುದನ್ನು ಪಟ್ಟುಹಿಡಿದು ಸಾಧಿಸಲು ನ್ಯಾಯಾಲಯಗಳು ಹೊರಟಿವೆ. ತಪ್ಪಿ ನಡೆಯುವ ಹೆಜ್ಜೆಗೆ ಕೊರಳನ್ನು ಕೊಡುವ ಶಾಸ್ತಿಗೆ ಸಿದ್ಧರಾಗಬೇಕೆನ್ನುವ ಎಚ್ಚರಿಕೆಯನ್ನು ಕೊಟ್ಟಿವೆ. ಜಡ್ಡು ಹಿಡಿದಂತೆ ವರ್ತಿಸುವ ಕಾರ್ಯಾಂಗವನ್ನು ತುದಿಗಾಲಲ್ಲಿ ನಿಲ್ಲಿಸಲು ಶಕ್ತವಾಗಿವೆ. ರಾಷ್ಟ್ರದ ಸಮಗ್ರತೆಯನ್ನು ಕಾಪಾಡುವ ಅಖಂಡ ದೃಷ್ಟಿಯನ್ನು ಸರಕಾರಗಳು ಹೊಂದಬೇಕಾದ ತುರ್ತನ್ನು ಮನಗಾಣಿಸುತ್ತಿವೆ. ಅಷ್ಟೇಕೆ! ಈವರೆಗೆ ಹಿಂದು ವಿಚಾರಗಳ ಬಗ್ಗೆ ಹಗುರವಾಗಿ ವರ್ತಿಸುವ ಶೈಲೂಷರನ್ನು ಕರೆಸಿ ಛೀಮಾರಿ ಹಾಕುವ ತಾಕತ್ತನ್ನು ತೋರಿಸಿವೆ.

ಇದೇ ಗತಿಸ್ಥಿತಿ ಮಾಧ್ಯಮಗಳದ್ದು. ಪತ್ರಕರ್ತರು ಉದ್ಯಮಿಗಳ ದಲ್ಲಾಳಿಗಳಾಗಿ ಸರಕಾರದೊಡನೆ, ಭೂಗತ ವ್ಯಕ್ತಿಗಳೊಡನೆ ನಡೆಸುವ ಒಪ್ಪಂದಗಳೀಗ ಜಗಜ್ಜಾಹೀರವಾಗಿದೆ. ಸಂಪಾದಕರು, ಸರಕಾರದಿಂದ ತಮ್ಮಿಚ್ಛೆಯ ಆಸಕ್ತಿಗಳನ್ನು ಈಡೇರಿಸಲು ವಿಫಲರಾದಾಗ ಸೇಡು ತೀರಿಸಿಕೊಳ್ಳಲು ತಮ್ಮ ಲೇಖನಿಯನ್ನು ದುರುಪಯೋಗಗೊಳಿಸುತ್ತಿರುವುದೂ ಸುಳ್ಳೇನಲ್ಲ; ತಮ್ಮ ಪ್ರಸಾರವನ್ನು ಹೆಚ್ಚಿಸಲು ಅನೈತಿಕತೆಯ ಗಡಿಯನ್ನು ಮುಟ್ಟುವುದು; ಸಾಮಾಜಿಕ ನಯನಾಜೂಕುಗಳನ್ನು ಮೀರುವ ಹುಂಬತನವನ್ನು ಪ್ರದರ್ಶಿಸುತ್ತಿರುವುದೂ ಇದೆ.

ಆದರೆ ಅದೇ ಕಾಲದಲ್ಲಿ ಹಲವು ಹಗರಣಗಳನ್ನು ಬೆಂಬತ್ತಿ ವರದಿ ಮಾಡಿದುದರಿಂದ. ಅಧಿಕಾರವೊಂದಿದ್ದರೆ ಸಾಕು; ಸ್ವೇಚ್ಛೆಯಿಂದ ನಡೆಯುವುದು ಬಹುದಿನ ಸಾಗದು ಎನ್ನುವ ಎಚ್ಚರಿಕೆಯ ಘಂಟೆಯನ್ನು ಮಾಧ್ಯಮಗಳು ಬಾರಿಸಿವೆ. ಜನಪರ ಹೋರಾಟಗಳನ್ನು ಬೆಂಬಲಿಸಿ ಅವುಗಳಿಗೆ ವೈಚಾರಿಕ ನೆಲೆಯನ್ನು ಒದಗಿಸಿವೆ. ಹಲವು ಅಮೂರ್ತ ವಿಚಾರಗಳಿಗೆ ಆಕೃತಿ ರೂಪವನ್ನು ಕೊಟ್ಟಿದ್ದು ಮಾಧ್ಯಮಗಳೆ.

ಇನ್ನು ಸಾಮಾಜಿಕ ಕಾರ್ಯಕರ್ತರ ಬಗ್ಗೆ. ತಮ್ಮದೇ ಟ್ರಸ್ಟ್‌ಗಳನ್ನು ಸ್ಥಾಪಿಸಿ, ಅವುಗಳಿಗೆ ಎಲ್ಲಾ ದಿಕ್ಕುಗಳಿಂದ ಹಣ ಹರಿದು ಬರಲಿ ಎನ್ನುವ ಆರ್ಥಿಕ ಆಸಕ್ತಿಗಳನ್ನು ಬೆನ್ನಟ್ಟುವ ಸಮಾಜ ಸೇವಕರು ತಾವೇ ಬದಲಾವಣೆಯ ದೃಷ್ಟಿಧೋರಣೆಗಳನ್ನು ಹೊಂದಿರುವವರೆಂದು ಬಿಂಬಿಸಿಕೊಳ್ಳುತ್ತಿದ್ದಾರೆ. ತರಹೇವಾರಿ ಭ್ರಷ್ಟದಾರಿಗಳನ್ನು ತುಳಿದವರೇ; ದೇಶದಲ್ಲಿ ಪ್ರತಿಭಾವಂತರು ಬೆರಳಣಿಕೆಯಲ್ಲಿರುವರೆಂದೂ; ಹಾಗೆ ಜನ್ಮ ತಳೆದವರು ತಾವೆಂದೂ ಹೇಳಿಕೊಳ್ಳುತ್ತಿದ್ದಾರೆ. ತಮ್ಮ ವೈಯಕ್ತಿಕ ಮೇಲುಗೈಗಾಗಿ ಹಲವು ಕರಾಳ ಪಾತ್ರಗಳನ್ನು ವಹಿಸಿದವರು ಇಂದು ಮೌಲ್ಯಗಳನ್ನು ಸಾಕಾರಗೊಳಿಸಲು ಪಣತೊಡುತ್ತಾರೆ. ಇವರಲ್ಲಿ ಲೇಖಕರು, ಕವಿಗಳಂತಹ ಅಸಾಮಾನ್ಯರೂ ಸೇರಿದ್ದಾರೆ.

ಇಷ್ಟಿದ್ದೂ ಏಕಶಿಲಾರೂಪದ ಸರಕಾರವನ್ನು ಮಣಿಸಬಹುದೆನ್ನುವ ಆಶಾದಾಯಕ ವಾತಾವರಣವನ್ನು ಈ ಮಂದಿ ಹುಟ್ಟಿಸಿರುವರು. ಪ್ರಜಾಪ್ರಭುತ್ವದ ಮುಖವಾಡ ಹೊತ್ತ ಸರ್ವಾಧಿಕಾರಿ ಪ್ರವೃತ್ತಿಯನ್ನು ಕಡಿವಾಣದಲ್ಲಿಡಬಲ್ಲೆವು ಎನ್ನುವ ಪೂರಕ ಸೃಷ್ಟಿಯ ಸಾಧ್ಯತೆಗಳನ್ನು ನಿರ್ಮಿಸಿರುವರು.

ಭ್ರಷ್ಟಹಾದಿಯಿಂದ ದೂರವೆಂದುಕೊಂಡ ಉದ್ಯಮಿಗಳು ಕೂಡಾ ಮಂತ್ರಿಗಳನ್ನು, ಅಧಿಕಾರಿಗಳನ್ನು ಓಲೈಸಲು ಕತ್ತಲ ದಾರಿಯನ್ನು ತುಳಿದುದು ಈಗ ಬಹಿರಂಗವಾಗಿದೆ. ಹಾಗಿದ್ದೂ ಅವೇ ಉದ್ಯಮಿಗಳು ದೇಶದ ಆರ್ಥಿಕ ಸ್ಥಿತಿಯನ್ನು ಸಾಮಾಜಿಕ ದೃಢತೆಯನ್ನು, ಸಾಂಸ್ಕೃತಿಕ ಆಶಯಗಳನ್ನು ಪೂರೈಸಲು ಪ್ರಯತ್ನಿಸಿದುದನ್ನು ಮರೆಯುವಂತಿಲ್ಲ.

ಹೀಗಾಗಿ ನ್ಯಾಯಾಂಗಕ್ಕೆ ಅವುಗಳ ಮಿತಿಯನ್ನು ತೋರಿಸಿಕೊಡಬೇಕು, ರಾಜಕಾರಣಿಗಳಿಗೆ ಪಾಠಕಲಿಸಬೇಕು, ಮಾಧ್ಯಮಗಳಿಗೆ ಮೂಗುದಾರವಿರಬೇಕು, ಸಾಮಾಜಿಕ ಕಾರ್ಯಕರ್ತರಿಗೂ ಕಡಿವಾಣ ಹಾಕಬೇಕು, ಉದ್ಯಮಿಗಳ ಆಸಕ್ತಿಗಳಿಗೆ ಇಂಬುಕೊಡಬಾರದೆನ್ನುವ ಈ ಎಲ್ಲಾ ಗೊಂದಲಗಳು ಒಂದು ಅಯೋಮಯ ಸ್ಥಿತಿಯನ್ನು ತಂದಿರಿಸಿವೆ. ಎಲ್ಲವೂ ಒಡೆದ ಗಾಜಿನಿಂದ ಕಾಣುವ ದೃಶ್ಯಗಳಂತೆ. ಯಾವುದೂ ನೇರವಲ್ಲ. ನಿಜವಲ್ಲ. ಪೂರ್ಣವಲ್ಲ. ಯಾರನ್ನೂ ನೆಚ್ಚುವಂತಿಲ್ಲ. ಇದೊಂದು ಸಮಗ್ರಮಂಥನಕಾಲ. ಚಂಡಮಾರುತವು ಬೀಸುವ ಮೊದಲು ನಿರ್ಮಾಣವಾಗಬೇಕಾದ ನಿರ್ವಾತ ಸ್ಥಿತಿಯಂತೆ. ಸತ್ಯಕ್ಕೆ ನೆಲೆಯಿಲ್ಲದೆ ಅಲೆದಾಡುವ ಭ್ರಾಮಕತೆ. ಬೀಜಹೊಟ್ಟು, ಪೈರುಕಳೆಗಳನ್ನು ಬೇರ್ಪಡಿಸಲಾಗದ ಬುದ್ಧಿಮಾಂದ್ಯತೆ. ಅಖಂಡ ದೃಷ್ಟಿಯಿಂದ ಶಿಷ್ಟಧರ್ಮವನ್ನು ಸ್ಥಾಪಿಸಬೇಕಾಗಿರುವ ನ್ಯಾಯಾಧೀಶರೇ "ಸಾರ್ವಜನಿಕವಾಗಿ ಪ್ರತಿಭಟಿಸಿ" ಎಂದು ಹೇಳಿ ಕೈಚೆಲ್ಲುವ ಕಾಲ. ಇದು ಹೀಗೆಯೇ ಆಗುವುದು. ರೂಢ ಮೂಲವಾದ ಹಲವು ದೃಷ್ಟಿಧೋರಣೆಗಳು ಪಲ್ಲಟಗೊಳ್ಳುವ ಸಂಕೀರ್ಣ ಕಾಲದಲ್ಲಿ, ಸನಾತನ ಮೌಲ್ಯಗಳು ಹೊಸದಾಗಿ ಮೂರ್ತಗೊಳ್ಳುವ ಮೊದಲು, ಪ್ರತಿಷ್ಠಾಪಿತ ವಿಗ್ರಹದ ಕಳಾಪಕರ್ಷಣ ವಿಧಿಯಂತೆ ಇದು. ಮತ್ತೆ ಆ ಶಕ್ತಿಯನ್ನು ಆವಾಹಿಸಿ ನೆಲೆಗೊಳಿಸುವ ಮೊದಲಿನ ಮಧ್ಯಂತರವಿದು. ಆವರೆಗೆ ಅವಿಶ್ರಾಂತವಾಗಿ ತೆರೆದ ಮನೋವಾಕ್ಕಾಯಗಳಿಂದ ತುಡಿಯಬೇಕು ದುಡಿಯಬೇಕು ಕಾಯುತ್ತಿರಬೇಕು. ಮೂಸೆಯಲ್ಲಿ ಕರಗಿದ ಚಿನ್ನ ಗಟ್ಟಿಗೊಳ್ಳಲು ಎಷ್ಟು ಹೊತ್ತು?

## ಅಭ್ಯಾಸವರ್ಗ

**ಕರ್ಕಿ :** ಕಾರವಾರ ಜಿಲ್ಲಾ ಕಾರ್ಯಕರ್ತರ ಒಂದು ದಿನದ ಅಭ್ಯಾಸವರ್ಗವು 02.10.2011ರಂದು ಹೊನ್ನಾವರ ತಾಲೂಕು ಕರ್ಕಿಯ ಶ್ರೀಜ್ಞಾನೇಶ್ವರಿ ಕಲ್ಯಾಣ ಮಂಟಪದಲ್ಲಿ ಪೂಜ್ಯ ಶ್ರೀ ಶ್ರೀ ಜ್ಞಾನೇಶ್ವರ ಭಾರತಿ ಸ್ವಾಮೀಜಿಯವರ ಕೃಪಾಶೀರ್ವಾದದೊಂದಿಗೆ ಜರುಗಿತು.

ಒಟ್ಟು 33 ಕಾರ್ಯಕರ್ತರು ಪಾಲ್ಗೊಂಡಿದ್ದರು. ಶ್ರೀ ಬಿ.ಜಿ. ಮೋಹನ ಕಾರವಾರ ಜಿಲ್ಲಾಧ್ಯಕ್ಷರು ವರ್ಗದ ಉದ್ಘಾಟನೆ ಮಾಡಿದರು. ಶ್ರೀ ಕೇಶವ ಹೆಗಡೆ ಉತ್ತರ ಮತ್ತು ದಕ್ಷಿಣ ಪ್ರಾಂತದ ಸಂಘಟನಾ ಕಾರ್ಯದರ್ಶಿ ಇವರು ವಕ್ತಾರರಾಗಿ ಆಗಮಿಸಿದ್ದರು. ಮಹಾಬಲೇಶ್ವರ ಹೆಗಡೆಯವರು ಅಭ್ಯಾಸವರ್ಗ ನಡೆಸಿಕೊಟ್ಟರು. ಶ್ರೀ ಎಂ.ಡಿ. ನಾಯ್ಕ ಹೊನ್ನಾವರ ತಾಲೂಕಾ ಪರಿಷದ್ ಅಧ್ಯಕ್ಷರು ಸ್ವಾಗತಿಸಿದರು. ಹಾಗೂ ಶ್ರೀ ಪರಮೇಶ್ವರ ಹೆಗಡೆ ಜಿಲ್ಲಾ ಕಾರ್ಯದರ್ಶಿ ಇವರು ವಂದನಾರ್ಪಣೆ ಮಾಡಿದರು. ಡಾ.ವಿ.ಜಿ. ಶೆಟ್ಟಿ ಉಪಾಧ್ಯಕ್ಷರು ಕಾರ್ಯಕ್ರಮದ ನಿರ್ವಹಣೆ ಮಾಡಿದರು. ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಟ್ಟ ಕರ್ಕಿಯ ಶ್ರೀ ಜ್ಞಾನೇಶ್ವರಿ ಮಠವನ್ನು ವಿಶ್ವ ಹಿಂದೂ ಪರಿಷತ್ತು ವಂದನೆಗಳೊಂದಿಗೆ ಸ್ಮರಿಸುತ್ತದೆ.

– ಡಾ. ವಿ.ಜಿ. ಶೆಟ್ಟಿ

# ಉತ್ತರಮೀಮಾಂಸಾ ಅಥವಾ ವೇದಾಂತದರ್ಶನ – 27

**ದ್ವೈತ ವೇದಾಂತ**

**ಒಂಬತ್ತು ಪ್ರಮೇಯಗಳು**

**(ಮುಂದುವರೆದಿದೆ)**

**– ಡಾ. ಎಂ. ಶಿವಕುಮಾರಸ್ವಾಮಿ**

**6. ಮುಕ್ತಿರ್ನೈಜಸುಖಾನುಭೂತಿಃ** (ಯೋಗ್ಯತಾನುಸಾರ ಸ್ವಾಭಾವಿಕಾನಂದದ ಅನುಭವವೇ ಮುಕ್ತಿ) : ಇಲ್ಲಿ 'ಯೋಗ್ಯತಾನುಸಾರ ಸ್ವಾಭಾವಿಕಾನಂದ' ಎಂದರೆ 'ಜೀವರುಗಳ ಸ್ವಂತವಾದ ಆನಂದ' ಎಂದರ್ಥ. ಮುಕ್ತಿಯಲ್ಲಿ ಅಂತಹ ಆನಂದ ಸಾಧ್ಯವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇಲ್ಲಿ ಒಂದು ಶ್ರುತಿವಾಕ್ಯವೂ ಇದೆ **"ಯತ್ರ ತ್ವಸ್ಯ ಸರ್ವಮ್ ಆತ್ಮೈವಾಭೂತ್ ಕೇನ ಕಂ ಪಶ್ಯೇತ್"** (ಬೃ.ಉ.,2.4.14;4.5.15 – ಎಲ್ಲಿ ಇವನಿಗೆ ಎಲ್ಲವೂ ಆತ್ಮವೇ ಆದ ಮೇಲೆ ಯಾವುದರ ಮೂಲಕ ಏನನ್ನು ನೋಡಬೇಕು?) ಎಂದು. ಈ ಶ್ರುತಿಯು ಮುಕ್ತಿದಶೆಯಲ್ಲಿ ಚೇತನ ಭೇದವನ್ನು ನಿರಾಕರಿಸಿ ನಿರ್ವಿಶೇಷ ಚೈತನ್ಯವೊಂದರ ಅಸ್ತಿತ್ವವನ್ನು ಸಾಧಿಸುತ್ತಿದೆ. ಇಂತಹವೇ ಬೇರೆ ಶ್ರುತಿಗಳೂ ಇವೆ. ಮುಕ್ತಿಯಲ್ಲಿ ಜೀವನಿಗೆ ದೊರೆಯುವುದು ಬ್ರಹ್ಮಾನಂದವೇ. ಹೀಗಿರುವಾಗ ಜೀವರುಗಳು ಸ್ವಂತ ಆನಂದವನ್ನು ಮುಕ್ತಿಯಲ್ಲಿ ಅನುಭವಿಸುತ್ತಾರೆ ಎಂಬುದು ಎಷ್ಟರಮಟ್ಟಿಗೆ ಸಮಂಜಸ? ಎಂಬುದೇ ಇಲ್ಲಿಯ ಪ್ರಶ್ನೆ. ಈಶಂಕೆಗೆ ದ್ವೈತವೇದಾಂತಿಗಳು ಉತ್ತರಿಸಿದ್ದಾರೆ. ಆ ಉತ್ತರಕ್ಕೆ ಶ್ರುತಿ–ಸ್ಮೃತಿಗಳ ಆಧಾರವಿದೆ.

ಈ ಕೆಳಗೆ ಕೊಟ್ಟ ಶ್ರುತಿಗಳನ್ನು ನೋಡಬಹುದು :

**(ಅ) ಯದಾ ಪಶ್ಯಃ ಪಶ್ಯತೇ ರುಗ್ಮವರ್ಣಂ**
**ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮ್ ।**
**ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ**
**ನಿರಂಜನಃ ಪರಮಂ ಸಾಮ್ಯಮುಪೈತಿ ॥**

**(ಆ) ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ।**
**ಸೋಽಶ್ನುತೇ ಸರ್ವಾನ್ ಕಾಮಾನ್ ಸಹಬ್ರಹ್ಮಣಾ ವಿಪಶ್ಚಿತಾ ॥**

**(ಇ) ಆನಂದಶ್ಮಶ್ರುರಾನಂದಕೇಶ ಆಪಾದನ ಖಾತ್ಸರ್ವ ಏವಾನಂದಃ ।**
**ಸ ಏವ ವಿಷ್ಣುರಜೋಽಽಮೃತೋಬ್ರಹ್ಮಯ ಏವಂ ವೇದಾನಂದ ಏವ ॥**
**ಸ ಭವತ್ಯಾನಂದಸ್ಯ ಸಮಾರ್ಷ್ಟಿತಾಂ ಸಲೋಕತಾಂ ಸಾಯುಜ್ಯಮೇತಿ ।**
**(ಮಾಧ್ಯಂದಿನಾಯನ ಶ್ರುತಿ – ಉಲ್ಲೇಖ : ಭಾ.ತಾ., 10.75.49)**

(ಅ) ಯಾವಾಗ ಜೀವನು ರುಗ್ಮವರ್ಣ (?) ವಿಶಿಷ್ಟನಾದ, ವಿಶ್ವಕರ್ತೃವಾದ, ಈಶ್ವರನಾದ ಪುರುಷ ಶಬ್ದವಾಚ್ಯನಾದ, ಬ್ರಹ್ಮನ ಜನಕನಾದ ಶ್ರೀಹರಿಯನ್ನು ಕಾಣುವನೋ ಆಗ ಪುಣ್ಯ–

ಪಾಪಗಳನ್ನು ತೊಡೆದುಕೊಂಡು ಅವನು (ಜೀವನು) ಯಾವುದೇ ದೋಷಕ್ಕೆ ಅಂಟಿಕೊಳ್ಳದೆ (ನಿರಂಜನನಾದ) ಇರುವವನಾಗಿ ಅವನೊಂದಿಗೆ ಪರಮಸಾಮ್ಯವನ್ನು ಹೊಂದುತ್ತಾನೆ.

(ಆ) ಯಾರು ತನ್ನ ಹೃದಯಗುಹೆಯಲ್ಲಿ ನೆಲೆಸಿರುವ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವನೋ ಅವನು ಪರಮಾಕಾಶದಲ್ಲಿ ಜ್ಞಾನಸ್ವರೂಪನಾದ ಅವನೊಂದಿಗೆ ಎಲ್ಲಾ ಇಚ್ಛೆಗಳನ್ನು ಪಡೆಯುತ್ತಾನೆ.

(ಇ) ಆನಂದವೇ ಮೀಸೆ, ಆನಂದವೇ ಕೂದಲು, ಕಾಲಿನ ಉಗುರಿನವರೆಗೆ ಎಲ್ಲವೂ ಆನಂದವೇ, ಅವನೇ ಹುಟ್ಟಿಲ್ಲದ ಸಾವಿಲ್ಲದ ಬ್ರಹ್ಮಪದವಾಚ್ಯನಾದ ವಿಷ್ಣುವು. ಯಾರು ಹಾಗೆ ತಿಳಿಯುವರೋ ಅವನೂ ಆನಂದವೇ. ಅವನು ಆನಂದದ ಸಮಾನ ಭಾಗವುಳ್ಳವನೂ ಸಾಲೋಕ್ಯಭಾಜನೂ ಸಾಯುಜ್ಯಸಂಪನ್ನನೂ ಆಗುವನು.

ಈ ಶ್ರುತಿಗಳು ಬ್ರಹ್ಮನಿಗಿಂತ ಭಿನ್ನವಾದ ಸ್ವಂತ ಆನಂದವನ್ನು ಜೀವನು ಹೊಂದುವನು ಎಂಬುದನ್ನು ಹೇಳುತ್ತವೆ. ಮೊದಲನೆಯ ಶ್ರುತಿಯಲ್ಲಿ ಜೀವನು 'ಪರಮಸಾಮ್ಯವನ್ನು ಹೊಂದುತ್ತಾನೆ' ಎಂದು ಹೇಳಿದೆ. ಅಂದರೆ ಅಭೇದಪ್ರಜ್ಞಾಯುಕ್ತ ಸಾಮ್ಯ. ಅಂದರೆ ಪರಮಾತ್ಮನ ಆನಂದವನ್ನು ಅನುಭವಿಸುತ್ತಾನೆ ಎಂದರ್ಥವಲ್ಲ. ಪರಮಾತ್ಮನಂತೆ ಕಾಣುತ್ತಾ ತನ್ನದೇ ಆನಂದವನ್ನು ಅನುಭವಿಸುತ್ತಾನೆ ಎಂದರ್ಥ. ಎರಡನೆಯ ಶ್ರುತಿಯಲ್ಲಿ ತನ್ನ ಹೃದಯವೆಂಬ ಗುಹೆಯಲ್ಲಿ ಪರಮಾತ್ಮನನ್ನು ಕಂಡು ಅವನೊಂದಿಗೆ ಎಲ್ಲಾ ಇಚ್ಛೆಗಳನ್ನು ಹೊಂದುತ್ತಾನೆ ಎಂದು ಹೇಳಿದೆ. ಅಂದರೆ ಆ ನೆಲೆಯ ಇಚ್ಛೆಗಳು ಎಂದರೆ ಆನಂದವೇ. ತನ್ನದೇ ಆನಂದದಲ್ಲಿ ಮುಳುಗುತ್ತಾನೆ ಎಂದರ್ಥ. ಸಾಮೀಪ್ಯ, ಸಾಲೋಕ್ಯ ಮತ್ತು ಸಾಯುಜ್ಯವೆಂಬ ಜೀವನ ಮುಕ್ತಿಯ ಸ್ಥಿತಿಗಳನ್ನು ಹೇಳುವ ಮೂರನೆಯ ಶ್ರುತಿಯು ಅವನ ಬ್ರಹ್ಮಭಿನ್ನನಿಜಾನಂದಾನುಭೂತಿಯನ್ನೇ ಹೇಳುತ್ತದೆ. (ಸಾಯುಜ್ಯಂ = ಸಯು ಜೋ ಭಾವಃ) ಭಿನ್ನತ್ವ ಬುದ್ಧಿಯಲ್ಲಿ ಆನಂದಬೇದವೂ ಸೇರಿದೆ.

ಈ ಕೆಳಗೆ ಕೊಟ್ಟ ಸ್ಮೃತಿ ವಾಕ್ಯಗಳಲ್ಲಿ ಈ ವಿಷಯವು ಸ್ಪಷ್ಟವಾಗಿದೆ:

**(ಅ) ನ ಹ್ಯಾನಂದೋ ನಿಜಸ್ತೇಷಾಂ ಪರೈರ್ಲಭ್ಯಃ ಕಥಂಚನ ।**
**ಕಿಮು ವಿಷ್ಣೋಃ ಪರಾನಂದೋ ನ ತೇ ವಿಷ್ಣೋರಿತಿ ಶ್ರುತೇಃ ॥**

**(ಆ) ಜ್ಯೋತಿರ್ಮಯೇಷು ದೇಹೇಷು ಸ್ವೇಚ್ಛಯಾ ವಿಶ್ವಮೋಕ್ಷಿಣಃ ।**
**ಭುಂಜತೇ ಸ್ವಸುಖಾನ್ಯೇವ ನ ದುಃಖಾದೀನ್ ಕದಾಚನ ॥**

**(ಇ) ಪೂರ್ಣಾನಂದಾದಿ ತೇऽಶ್ನಂತಿ ಪೂರ್ಣಾನಂದಾದಿಕಾಃ ಸ್ವತಃ ।**
**ಬ್ರಹ್ಮಣೋ ಬ್ರಹ್ಮಸಂಪತ್ತಿಮ್ ಅತ ಆಹಶ್ರುತಿಃಸ್ಫುಟಮ್ ।**
**ನ ಪರಬ್ರಹ್ಮತಾವಾಪ್ತಿಃ ನ ತೇ ವಿಷ್ಣಾವಿತಿ ಶ್ರುತೇಃ ॥**

(ಅ) ಅವರ (ಜೀವರುಗಳ) ನಿಜಾನಂದವು ಯಾವುದೇ ರೀತಿಯಲ್ಲಿ ಬೇರೆಯವರಿಂದ ಲಭ್ಯವಲ್ಲ. ಅಂದ ಮೇಲೆ ವಿಷ್ಣುವಿನ ಪರಾನಂದದ ಬಗ್ಗೆ ಮತ್ತೇನು ಹೇಳಬೇಕು? ಏಕೆಂದರೆ "ನ ತೇ

ವಿಷ್ಣೋರ್ಜಾಯಮಾನೋ ನ ಜಾತಃ" (ವಿಷ್ಣುವಿನ ವ್ಯಕ್ತವಾಗುತ್ತಿರುವ ಆನಂದವು ನಿನ್ನದಲ್ಲ, ವ್ಯಕ್ತವಾದ ಅದೂ ನಿನ್ನದಲ್ಲ), ಎಂಬ ಶ್ರುತಿಯಿರುವುದರಿಂದ.

ಆ) ಎಲ್ಲಾ ಮುಕ್ತರು (ವಿಶ್ವ-ಮೋಕ್ಷಿಣಃ) ಜ್ಯೋತಿರ್ಮಯವಾದ (ಜ್ಞಾನಾನಂದ ಸ್ವರೂಪಿಗಳಾದ) ದೇಹಗಳಲ್ಲಿ ಸ್ವ-ಇಚ್ಛೆಯಿಂದ ಸ್ವಂತದ ಸುಖಗಳನ್ನೇ ಅನುಭವಿಸುತ್ತಾರೆ, ದುಃಖಾದಿಗಳನ್ನು ಅಲ್ಲ.

(ಇ) ಪೂರ್ಣಾನಂದಾದಿಗಳನ್ನು ಅವರು (ಜೀವರು) ಅನುಭವಿಸುತ್ತಾರೆ. ಆ ಪೂರ್ಣಾನಂದಾದಿಗಳು ಸ್ವಂತವಾದವುಗಳೇ. ಬ್ರಹ್ಮನದು ಬ್ರಹ್ಮಸಂಪತ್ತು (ಬ್ರಹ್ಮನದೇ ಸ್ವತ್ತು). ಆದ್ದರಿಂದ ಶ್ರುತಿಯು ಸ್ಪಷ್ಟವಾಗಿ ಹೇಳುತ್ತದೆ – 'ನ ತೇ ವಿಷ್ಣೋರಿತಿ ಶ್ರುತಿಃ'– ಜೀವನಿಗೆ ಬ್ರಹ್ಮತ್ವಪ್ರಾಪ್ತಿಯಿಲ್ಲ, ಎಂದು.

ಹೀಗೆ ಆನಂದದ ಅನುಭವವೇ ಮೋಕ್ಷವೆಂದು ಹೇಳಿರುವುದರಿಂದ, ಜೀವನಿಗೆ ಬ್ರಹ್ಮಾನಂದ ಬಾಧಿತವಾದ್ದರಿಂದ ಜೀವನ ಸ್ವರೂಪಭೂತವಾದ ಆನಂದದ ಅನುಭವವು ಮೋಕ್ಷವೆಮಬುದು ಸಿದ್ಧವಾಗುತ್ತದೆ.

**7. ಅಮಲಾ ಭಕ್ತಿಶ್ಚ ತತ್ಸಾಧನಮ್** (ನಿರ್ಮಲಭಕ್ತಿಯೇ ಮುಕ್ತಿಸಾಧನ)

"ತಮೇವ ವಿದಿತ್ವಾತಿಮೃತ್ಯುಮೇತಿ" (ಶ್ವೇ.ಉ.3.8;6.15) – ಅವನನ್ನೇ (ಪರಮಾತ್ಮನನ್ನೇ) – ತಿಳಿದು ಮೃತ್ಯುವನ್ನು ದಾಟುತ್ತಾನೆ; "ಬ್ರಹ್ಮವೇದ ಬ್ರಹ್ಮೈವ ಭವತಿ" (ಮುಂ.ಉ., 3.2.9) – ಬ್ರಹ್ಮವನ್ನು ತಿಳಿದು ಬ್ರಹ್ಮವೇ ಆಗುತ್ತಾನೆ, ಇತ್ಯಾದಿ ಶ್ರುತಿಗಳು ಜ್ಞಾನವೇ ಮುಕ್ತಿ ಸಾಧನವೆಂದು ಹೇಳುತ್ತಿರುವಾಗ 'ನಿರ್ಮಲಭಕ್ತಿಯೇ ಮುಕ್ತಿಸಾಧನ' ಎಂದು ಹೇಗೆ ತಾನೇ ಹೇಳಲಾದೀತು. ಎಂಬುದು ಈ ಪ್ರಮೇಯಕ್ಕೆ ಮುಖ್ಯವಾದ ಆಕ್ಷೇಪ.

ಇದಕ್ಕೆ ಉತ್ತರ : ಭಕ್ತಿ ಎಂದರೆ ಜ್ಞಾನ ಮತ್ತು ಪ್ರೀತಿಗಳ ಸಮನ್ವಯ. ಎಲ್ಲೆಲ್ಲಿ ಜ್ಞಾನವನ್ನು ಮುಕ್ತಿ ಸಾಧನವೆಂದು ಹೇಳಿದೆಯೋ ಅಲ್ಲೆಲ್ಲಾ ಜ್ಞಾನಜನ್ಯವಾದ ಭಕ್ತಿಯೆಂದು ತಿಳಿದುಕೊಳ್ಳಬೇಕು. ಹರಿವಂಶಪುರಾಣವು ಹೀಗೆ ಹೇಳುತ್ತದೆ.

**ದ್ವಾದಶ್ಯಾದಿವ್ರತಂ ಚೈವ ತುಲಸ್ಯಾದ್ಯೈರಥಾರ್ಚನಮ್ ।**
**ಸರ್ವಂ ಭಕ್ತ್ಯರ್ಥಮುದ್ದಿಷ್ಟಂ ನಿಷ್ಫಲಂ ತತ್ತು ತಾಂ ವಿನಾ ॥**

ದ್ವಾದಶ್ಯಾದಿ ಎಲ್ಲಾ ವ್ರತಗಳು, ತುಳಸ್ಯಾದಿಗಳಿಂದ ಪೂಜಿಸುವುದು ಮುಂತಾದವು ಭಕ್ತಿಗಾಗಿ. ಭಕ್ತಿಯಿಲ್ಲದೆ ಯಾವ ಸಾಧನೆಯೂ (ಜ್ಞಾನವೂ ಕೂಡ) ಫಲಕಾರಿಯಲ್ಲ. ಇದೇ ನಿರ್ಣಯ:

**ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃಸರ್ವತೋಽಧಿಕಃ ।**
**ಸ್ನೇಹೋ ಭಕ್ತಿರಿತಿ ಪ್ರೋಕ್ತಃ ತಯಾ ಮುಕ್ತಿರ್ನ ಚಾನ್ಯಥಾ ॥**

ಮಾಹಾತ್ಮ್ಯಜ್ಞಾನ ಪೂರ್ವಕವಾದ ಸುದೃಢ ಎಲ್ಲಕ್ಕಿಂತ ಅಧಿಕವಾದ ಸ್ನೇಹವೇ ಭಕ್ತಿ. ಆಭಕ್ತಿಯಿಂದಲೇ ಮುಕ್ತಿ, ಬೇರೆ ರೀತಿಯಿಂದಲ್ಲ.

# ಸಂತಕನಕದಾಸ ಜಯಂತಿ ಉತ್ಸವ ಕಾಗಿನೆಲೆ



**– ವಾಸುದೇವರಾಜು ಪ್ರಾಂತ ಸೇವಾ ಪ್ರಮುಖ್**

ಕಾಗಿನೆಲೆಯಂಥಹ ಸಣ್ಣ ಊರು ಇಂತಹ ಒಂದು ಸುಂದರ ಕಾರ್ಯಕ್ರಮವನ್ನು ನಿರೀಕ್ಷಿಸುತ್ತಿರುವುದು ಸಹಜವೆ. ಕನಕದಾಸ ಜಯಂತಿಯ ಸಂಗೀತೋತ್ಸವದಲ್ಲಿ ಭಾಗವಹಿಸಲು ಬರುವ ಸಂಗೀತಗಾರರಿಗಂತೂ ಅದು ಕನ್ನಡದ ಸಂತ, ಕವಿ, ವಾಗ್ಗೇಯಕಾರರೊಬ್ಬರಿಗೆ ಸಂಗೀತ ನಿವೇದನೆಯ ಮೂಲಕ ನಮಿಸುವ ಸಂಪ್ರದಾಯವಾಗಿದೆ.

ಕಾರ್ತಿಕ ಕೃಷ್ಣ ತದಿಗೆ ಅಂದರೆ ಈ ವರ್ಷದ ದಶಂಬರ ತಿಂಗಳ 13 ಸಂತ ಕನಕದಾಸರ ಜಯಂತಿ. ಭಾರತ ಸಂಸ್ಕೃತಿ ಪ್ರತಿಷ್ಠಾನದ ಎರಡು ದಿನಗಳ ಈ ವಾರ್ಷಿಕ ಸಾಂಸ್ಕೃತಿಕ ಕಾರ್ಯಕ್ರಮಗಳು 12 ಮತ್ತು 13ರಂದು ನಡೆದವು.

12ರಂದು ಹಾವೇರಿ ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಹಾಗು ಮಹಿಳಾ ಮಂಡಳಿಗಳಿಗಾಗಿ ನಡೆದ ಸಂಗೀತ, ಭಾಷಣ, ರಂಗೋಲಿ ಸ್ಪರ್ಧೆಗಳಲ್ಲಿ ಭಾಗವಹಿಸಿದವರು 600ಕ್ಕೂ ಹೆಚ್ಚು ಸಭಿಕರ ಮನಸ್ಸನ್ನು ಗೆದ್ದರು. 13 ಪ್ರೌಢಶಾಲೆಗಳ ವಿದ್ಯಾರ್ಥಿಗಳು ತಮ್ಮ ತಮ್ಮ ಶಾಲೆಗಳ ಸಮವಸ್ತ್ರದಲ್ಲಿ ಬಂದಿದ್ದು ಸಾಮೂಹಿಕ ತಂಡಗಳಲ್ಲಿ ಕನಕದಾಸರ ಕೀರ್ತನೆಗಳನ್ನು ಹಾಡುವ ಸ್ಪರ್ಧೆಯಲ್ಲಿ ಭಾಗವಹಿಸಿದರು. ಹಾರ್ಮೋನಿಯಂ, ತಬ್ಲಾ ಮೊದಲಾದ ಸಂಗೀತ ಪರಿಕರಗಳೊಡನೆ ತನ್ಮಯರಾಗಿ ಹಾಡಿ ಮಕ್ಕಳನ್ನು ತರಬೇತಿ ನೀಡಿ ಸಿದ್ಧಪಡಿಸಿದ ಶಾಲೆಯ ಶಿಕ್ಷಕರೂ ಅವರೊಡನೆ ಬಂದು ಪ್ರತಿಷ್ಠಾನದ ಕಾರ್ಯಕರ್ತರೊಂದಿಗೆ ಒಂದಾಗಿ ಬೆರೆತಿದ್ದುದೂ ಕನಕದಾಸರ ಸಮರಸತೆಯ ಚಿಂತನಾಕ್ರಮದ ಗೆಲುವೇ ಎನ್ನಬೇಕು. ಆರೋಗ್ಯಕರವಾದ ಸ್ಪರ್ಧೆ, ಗೆಲುವಿನ ಬಹುಮಾನ, ಸಾಮೂಹಿಕವಾಗಿ ಪ್ರಸಾದ ಸ್ವೀಕಾರ ಇವೆಲ್ಲವೂ ಎಳೆಯರ ಮನಸ್ಸಿನಲ್ಲಿ ಆಳವಾದ ಪ್ರಭಾವ ಬೀರುವುದರಲ್ಲಿ ಸಂಶಯವಿಲ್ಲ. ಅಂದಿನ ಸಭೆಯ ಕಾರ್ಯಕ್ರಮದ ವೇದಿಕೆಯಲ್ಲಿ ಪ್ರತಿಷ್ಠಾನದ ಆಡಳಿತ ವಿಶ್ವಸ್ಥರಾದ ಟಿ.ಆರ್.ಶೆಣೈ, ಕಾರ್ಯದರ್ಶಿಗಳಾದ ರಮೇಶ ಪರಾಂಡೆ ಹಾಗೂ ಜಯಂತಿ ಉತ್ಸವದ ಕಾರ್ಯದರ್ಶಿಗಳೊಬ್ಬರಾದ ರವೀಂದ್ರರವರು ಉಪಸ್ಥಿತರಿದ್ದರು. ತೀರ್ಪುಗಾರರಾಗಿ ಡಾ॥

ಅಜಿತ ಕುಮಾರ್, ಶ್ರೀಮತಿ ಸರಯೂ, ಹಾಗೂ ಶ್ರೀಮತಿ ಪ್ರಭಾಶೆಣೈಯವರು ಭಾಗವಹಿಸಿದರು.

13 ಭಾನುವಾರದ ಸಂಗೀತೋತ್ಸವದಲ್ಲಿ ಕಳೆದೆಲ್ಲ ವರ್ಷಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಂಗೀತಗಾರರು ಬಂದು ಪಾಲ್ಗೊಂಡಿದ್ದರು. ಬೆಳಿಗ್ಗೆ ನಡೆದ ನಗರ ಸಂಕೀರ್ತನೆಯಲ್ಲಿ ಭಜನಾ ತಂಡಗಳು, ಕೋಲಾಟದವರು, ತಿರುಪತಿ ದಾಸ ಸಾಹಿತ್ಯದ ಭಜನಾ ಮಂಡಳಿಗಳು ಕನಕದಾಸರ ಭವ್ಯ ಭಾವಚಿತ್ರದೊಂದಿಗೆ ವರ್ಣರಂಜಿತ ಮೆರವಣಿಗೆಯಲ್ಲಿ ಕನಕಗುರು ಪೀಠದಿಂದ ಹೊರಟಿತು. ಶ್ರೀಗುರುಗಳ ಆಶೀರ್ವಾದದೊಂದಿಗೆ ಆದಿಕೇಶವನ ದರ್ಶನವನ್ನು ಮಾಡಿದ ಮೆರವಣಿಗೆಯು ಸಂಗೀತೋತ್ಸವದ ಸಭಾಂಗಣವನ್ನು ತಲುಪಲು ಒಂದು ಘಂಟೆಗೂ ಹೆಚ್ಚಿನ ಸಮಯವನ್ನು ತೆಗೆದುಕೊಂಡಿತು.

ಈ ವರ್ಷದ ಸಾಮೂಹಿಕ ಸಂಗೀತೋತ್ಸವದಲ್ಲಿ 1300 ಕ್ಕೂ ಹೆಚ್ಚು ಸಂಗೀತಗಾರರು ಭಾಗವಹಿಸಿ ಸಭಾಂಗಣವಿಡೀ ತುಂಬಿ ಸ್ಥಳಾವಕಾಶವಿಲ್ಲದೆ ಹೋಯಿತು. ಪೂಜ್ಯ ನಿರಂಜನಾನಂದ ಪುರಿ ಸ್ವಾಮಿಗಳ ಸದಾಶಯದ ಆಶೀರ್ವಚನದೊಂದಿಗೆ ಉತ್ಸವವು ಪ್ರಾರಂಭವಾಯಿತು. ಶ್ರೀಗಳು ಹಿಂದುಸ್ಥಾನಿ ಪದ್ಧತಿಯ ಎಲ್ಲಾ ಕೀರ್ತನೆಗಳನ್ನೂ, ಗಮಕ ಪದ್ಧತಿಯ ಕನಕದಾಸರ ಕಾವ್ಯವಾಚನವನ್ನೂ, ಕರ್ನಾಟಕ ಶೈಲಿಯ ಎರಡು ಕೀರ್ತನೆಗಳನ್ನೂ ಆಸ್ವಾದಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶಾಂತಣ್ಣ ಕಡಿವಾಳ ಹಾಗೂ ತಿರುಪತಿ ತಿರುಮಲ ದೇವಸ್ಥಾನದ ದಾಸಕೂಟದ ವಾದಿರಾಜರವರು ವೇದಿಕೆಯಲ್ಲಿದ್ದರು.

ಮುಂದಿನ ಉತ್ಸವ ಭಾಗದಲ್ಲಿ ಹಾವೇರಿ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀ ಶ್ರೀವರರವರೂ, ಕಾಗಿನೆಲೆ ಪ್ರಾಧಿಕಾರದ ಆಯುಕ್ತರಾದ ಶ್ರೀ ರೇವಣಪ್ಪನವರೂ ಉಪಸ್ಥಿತರಿದ್ದುದು ವಿಶೇಷ.

ವಿಶ್ವಹಿಂದು ಪರಿಷತ್ತಿನ ಉತ್ತರ ಕರ್ನಾಟಕ ಪ್ರಾಂತ್ಯದ ರಮೇಶ ಕುಲಕರ್ಣಿ, ಚಂದ್ರಶೇಖರ ಧವಳಗಿ, ರೇವಣಸಿದ್ಧಪ್ಪ, ಕೇಣಿ ಮೊದಲಾದ ಪದಾಧಿಕಾರಿಗಳ ಪೂರ್ಣ ತಂಡವೇ ಆಗಮಿಸಿದ್ದು ಮುಂದಿನ ವರ್ಷಗಳಲ್ಲಿ ಉತ್ಸವದ ಜವಾಬ್ದಾರಿಯನ್ನು ವಹಿಸುವ ಉತ್ಸಾಹವನ್ನು ವ್ಯಕ್ತಪಡಿಸಿದರು.

ಕಾಗಿನೆಲೆಯ ಊರಿಡೀ ಈ ಸುಂದರ, ಸಾಂಸ್ಕೃತಿಕ ಹಬ್ಬದಿಂದ ವರ್ಣಮಯವಾಗಿದ್ದಿತು.

**ಭಾವಚಿತ್ರಗಳು ರಕ್ಷಾಪುಟ 1**

## ಉಚಿತ ನೇತ್ರ ಚಿಕಿತ್ಸಾ ಶಿಬಿರ

**ಮಡಿಕೇರಿ :** ಅಶ್ವಿನಿ ಆಸ್ಪತ್ರೆಯ 25ನೇ ವರ್ಷದ ಉಚಿತ ನೇತ್ರ ಚಿಕಿತ್ಸಾ ಶಿಬಿರವು ನವೆಂಬರ್ 16ರಿಂದ 22ರವರೆಗೆ ನಡೆಯಲಿದೆ. ಒಂದು ವಾರದ ಕಾಲ ಪೂರ್ವಭಾವಿಯಾಗಿ ತಾಲೂಕಿನ 55 ಸ್ಥಳಗಳಲ್ಲಿ ಕಣ್ಣಿನ ಪರೀಕ್ಷೆಯ ಶಿಬಿರಗಳು ನಡೆದು ಶಸ್ತ್ರ ಚಿಕಿತ್ಸೆಯ ಅವಶ್ಯವಿರುವವರನ್ನು ಅಶ್ವಿನಿ ಆಸ್ಪತ್ರೆಗೆ ಕಳುಹಿಸಲಾಗುವುದು. ಈವರೆಗೆ 70 ಸಾವಿರ ಮಂದಿಯ ತಪಾಸಣೆ ನಡೆದಿದ್ದು 7 ಸಾವಿರಕ್ಕೂ ಹೆಚ್ಚು ಜನರಿಗೆ ಶಸ್ತ್ರ ಚಿಕಿತ್ಸೆಯೂ ಕನ್ನಡಕದ ವಿತರಣೆಯೂ ಉಚಿತವಾಗಿ ನಡೆದಿದೆ.

ರಾಜ್ಯಾದ್ಯಂತದಿಂದ ನಿಷ್ಣಾತ ನೇತ್ರ ತಜ್ಞರು ಬಂದು ಶಿಬಿರವನ್ನು ಯಶಸ್ವಿಗೊಳಿಸುತ್ತಿರುವುದು ಅಶ್ವಿನಿಯ ಈ ಶಿಬಿರದ ವಿಶೇಷ.

# ಹನುಮಾನ್ ಚಾಲೀಸಾ – 15

**– ಹ.ಸು. ಸುಬ್ಬರಾವ್, ಬೆಂಗಳೂರು**

**ತುಮ್ಹರೋ ಮಂತ್ರ ಬಿಭೀಷನ ಮಾನಾ ।**
**ಲಂಕೇಶ್ವರ ಭಏ ಸಬ ಜಗ ಜಾನಾ ॥ 17 ॥**



(ಹನುಮಾನ್ ಚಾಲೀಸಾವನ್ನು ತುಲಸೀದಾಸರು ಸಂಸ್ಕೃತ ವಿದ್ವಾಂಸರಾಗಿದ್ದರೂ, ಉತ್ತರ ಭಾರತದಲ್ಲಿ ಆಗ ಆಡುಭಾಷೆಯಾಗಿದ್ದ ಅವಧಿ ಮತ್ತು ಮಾಗಧಿ ಭಾಷೆಯಲ್ಲಿ ರಚಿಸಿದರು. ಈಗಿನ ಹಿಂದೀ ಭಾಷೆಗೂ ಆಗಿನ ಭಾಷೆಗೂ ಬಹಳಷ್ಟು ವ್ಯತ್ಯಾಸಗಳಿವೆ. ವಿಭೀಷಣ ಎಂಬುದು ಬಿಭೀಷನ ಎಂದಿದೆ, ಇಲ್ಲಿ ಜಾನಾ ಎಂದರೆ ತಿಳಿದಿದೆ – ಎಂದರ್ಥ).

ಎಲೈ ಹನುಮಂತನೇ, ನಿನ್ನ ಆಲೋಚನಾ ವಿಧಾನವನ್ನು ಅಂಗೀಕರಿಸಿದ ವಿಭೀಷಣನು ಲಂಕೇಶ್ವರ ನಾದನು; ಈ ಸಂಗತಿಯು ವಿಶ್ವಕ್ಕೇ ತಿಳಿದಿದೆ.

ಮಂತ್ರ ಎಂದರೆ ಸಲಹೆ. ಹನುಮಂತನು ಮಾತಿನಲ್ಲಿ ಚತುರ; ದೇಹಬಲದಂತೆಯೇ ಮಾತಿನ ಬಲವೂ ಅವನಿಗೆ ಜನುಮದಿಂದಲೇ ಲಭಿಸಿದೆ. ಕ್ಷಿಪ್ರವಾಗಿ ಆಲೋಚನೆ ಮಾಡುವುದರಲ್ಲಿ ಎತ್ತಿದ ಕೈ. ಅಂತಹ ಹನುಮಂತನು ಸೀತೆಯನ್ನು ಹುಡುಕುತ್ತಾ ಲಂಕಾಪಟ್ಟಣವನ್ನು ಸುತ್ತುತ್ತಿದ್ದಾನೆ. ಎಲ್ಲೆಲ್ಲೂ ರಾಕ್ಷಸರದ್ದೇ ಗದ್ದಲ–ಗಲಾಟೆ! ಇದೆಲ್ಲವನ್ನೂ ಗಮನಿಸುತ್ತಾ ಹೋಗುತ್ತಿದ್ದ ಹನುಮನಿಗೆ ಒಂದು ಮನೆಯಲ್ಲಿ ರಾಮಭಜನೆಯು ನಡೆಯುತ್ತಿದ್ದುದ್ದನ್ನು ಕೇಳಿ ಅಚ್ಚರಿಯಾಯಿತು.

ಅಚ್ಚರಿಯಿಂದ ಅತ್ತ ಸಾಗಿದನು.

ರಾಮಚರಿತ ಮಾನಸದಲ್ಲಿ ಹೀಗಿದೆ. ಮನೆ ಮನೆಯನ್ನೂ ಹುಡುಕುತ್ತಾ ಹೊರಟಿದ್ದ ಹನುಮನಿಗೆ ಒಂದು ದಿವ್ಯವಾದ ಮಣಿಮಯ ಭವನವು ಕಾಣಿಸಿತು. ಮನೆಯ ಹೊರಗೋಡೆಯ ಮೇಲೆ ಧನುರ್ಬಾಣಗಳ ಚಿಹ್ನೆಯಿದ್ದಿತು. ಮನೆಯ ಸುತ್ತಲೂ ತುಲಸೀಗಿಡಗಳಿದ್ದುವು. ಆ ಭವನದ ಮುಂದೆ ನಿಂತನು. ರಾಕ್ಷಸರ ಮಧ್ಯೆ ಇದೊಂದು ಸಾತ್ವಿಕ ವ್ಯಕ್ತಿ ಇದ್ದಾನಲ್ಲ. ಎಲ್ಲರೂ ಮದಿರೆಯ ಮತ್ತಿನಲ್ಲಿ ಮಲಗಿರುವಾಗ ಈ ಸಜ್ಜನನು ಎಚ್ಚರವಾಗಿರುವನಲ್ಲಾ! ಎಂದುಕೊಂಡು ಮೆಲ್ಲ ಮೆಲ್ಲನೆ ಒಳಗೆ ಬಂದನು, ನೋಡಿದರೆ ಅವನು ರಾವಣನ ತಮ್ಮ ವಿಭೀಷಣ! ಗೋಡೆಗಳ ಮೇಲೆ ಭಗವಂತನ ಲೀಲಾವಿಶೇಷಗಳ ಅನೇಕ ಚಿತ್ರಪಟಗಳು. ಎಲ್ಲೆಡೆಯೂ ಪವಿತ್ರವಾದ ಪೂಜಾ ವಸ್ತುಗಳು. ಹರಿನಾಮದ ಭಜನೆ, ಹಾಡುಗಳನ್ನು ಹೇಳುತ್ತಿರುವ ಅಸಂಖ್ಯ ಗಾಯಕರ ಸಮೂಹ. ಇವೆಲ್ಲವನ್ನೂ ನೋಡಿ ಹನುಮನು ಹರ್ಷಿತನಾದನು.

ತೊರವೆ ರಾಮಾಯಣದಲ್ಲಿ ಈ ಸಂದರ್ಭವನ್ನು ಸೊಗಸಾಗಿ ನಿರೂಪಿಸಿದೆ. ಹನುಮನು ವಿಭೀಷಣನನ್ನು ನೋಡಿ, ಇದೇನು? ದುರ್ಜನರ ಮಧ್ಯೆ ಸಜ್ಜನ! ಪಂಜರಗಳಲ್ಲಿರುವ ಗಿಣಿಗಳು ರಾಮ! ರಾಮ! ಎನ್ನುತ್ತಿವೆ. ಈತನು ಧರ್ಮಿಷ್ಠನು; ನೀತಿ ನಿಪುಣನು; ಪರಮ ವೈಷ್ಣವನು; ಇವನು ಇರಬೇಕಾದ ಸ್ಥಳವು ಇದಲ್ಲ; ಹಗಲು ರಾತ್ರಿ ದುಷ್ಟರ ಮಧ್ಯದಲ್ಲಿ ವಾಸಿಸುತ್ತಾ ಧರ್ಮಾಚರಣೆಯನ್ನು ಮಾಡುವುದು ಇವನಿಗೆ ಬಹಳ ಕಷ್ಟವಾಗಿದೆ. ಇವನನ್ನು ರಾಮನ ಬಳಿಗೆ ಒಯ್ಯಬೇಕು; ಮೊದಲು ಇವನ ಸ್ನೇಹವನ್ನು ಮಾಡೋಣ, ಸಜ್ಜನರ ಸಂಗದಿಂದ ಲಾಭವೇ ಹೊರತು ನಷ್ಟವಿಲ್ಲ. – ಎಂದು ಹನುಮನು ವಿಚಾರಮಾಡಿ ಸಾಧು ವೇಷದಿಂದ ಒಳ ಅಂಗಣಕ್ಕೆ ಬಂದನು.

ಆ ವೇಳೆಗೆ ಸರಿಯಾಗಿ ವಿಭೀಷಣನೂ ಅವನನ್ನು ನೋಡಿದನು. ಇವನೇ ರಾಮಭಕ್ತ ಹನುಮ ಎಂದು ಗುರುತಿಸಿ, ಅವನನ್ನು ಸ್ವಾಗತಿಸಿ, ಅಪ್ಪಿಕೊಂಡು ಒಳಕ್ಕೆ ಕರೆದು ತಂದು ಪೀಠದ ಮೇಲೆ ಕುಳ್ಳಿರಿಸಿ ರಾಮನ ವಿಚಾರವನ್ನು ಕೇಳಿದನು. ಎಲೈ ಸಾಧುಗಳೇ, ತಮ್ಮನ್ನು ನೋಡಿದ ಕೂಡಲೆ, ತಾವು ಹರಿಭಕ್ತರೆಂದೂ, ದೈವಭಕ್ತರೆಂದೂ, ನನ್ನ ಮನಸ್ಸಿಗೆ ಶ್ರೀರಾಮನೇ ಈ ರೂಪದಿಂದ ಬಂದಿರುವಂತೆ ಭಾಸವಾಗುತ್ತಿದೆ. ನಾನು ಅತ್ಯಂತ ನೀಚ ಸ್ವಭಾವದ ರಾಕ್ಷಸನಾಗಿರುವೆ. ಶೋಕಮಯವಾದ ಈ ಲಂಕೆಯ ವಾತಾವರಣವನ್ನು ತ್ಯಜಿಸಿ, ವಿಷಯವಾಸನೆಗಳನ್ನು ದೂರಮಾಡಿ, ಸಕಲ ಕಾಮನೆಗಳನ್ನೂ ತ್ಯಜಿಸಿ, ಶ್ರೀರಾಮನನ್ನು ಭಜಿಸುವ ತನಕ ನನಗೆ ನೆಮ್ಮದಿಯಿಲ್ಲ. ರಾಮನು ನನ್ನ ಹೃದಯದಲ್ಲಿ ನೆಲೆಸುವ ತನಕ ಅವಗುಣಗಳು ತೊಲಗಲಾರವು. ಮಮಕಾರವೆಂಬ ಕತ್ತಲ ರಾತ್ರಿಯು ರಾಗ–ದ್ವೇಷಗಳೆಂಬ ಗೂಬೆಗೆ ಸುಖಕರವಾಗಿರುವುದು. ರಾಮನ ದರ್ಶನದಿಂದ ಅವೆಲ್ಲವೂ ನಾಶವಾಗಿ ನನಗೆ ಸುಖವುಂಟಾದೀತು. ಮುನಿ–ತಾಪಸರ ತಪಸ್ಸಿಗೂ ಗೋಚರನಾಗದ ಆ ಪ್ರಭು ರಾಮನ ದರ್ಶನ ತಾವು ಮಾಡಿಸಬೇಕು – ಎಂದನು.

ಹನುಮನು ಅತಿ ಉತ್ಸಾಹದಿಂದ ತನ್ನ ನಿಜ ಪರಿಚಯವನ್ನು ಮಾಡಿಕೊಟ್ಟು, ರಾಮನ ವಿಚಾರವೆಲ್ಲವನ್ನೂ ತಿಳಿಸಿ, ಎಲೈ ವಿಭೀಷಣ ನೀನು ಇರಬೇಕಾದ ಸ್ಥಳವು ಇದಲ್ಲ; ನೀನು ರಾಮನ ಬಳಿ ಇರಬೇಕಾದವನು. ಈ ರಾಕ್ಷಸರು ರಾವಣನ ದಾಸರು. ನೀನು ರಾಮದಾಸನಾಗು ನಿನಗೆ ಮೋಕ್ಷವು ಸಿಕ್ಕುವುದು – ಎಂದು ಬೋಧಿಸಿದನು.

ಆಗ ವಿಭೀಷಣನು ಕೈಮುಗಿದು, ‘ಹನುಮ, ನಾನು ಹಿಂದಿನಿಂದಲೂ ರಾಮದಾಸನೇ ಆಗಿದ್ದೇನೆ. ಪ್ರತಿದಿನವೂ ರಾಮಧ್ಯಾನವನ್ನೇ ಮಾಡುತ್ತೇನೆ’ –ಎಂದನು. ಆಗ ಹನುಮನು “ಇಷ್ಟು ಮಾಡಿದರೆ ಸಾಲದು, ರಾಮಕಾರ್ಯದಲ್ಲಿ ನಿನ್ನನ್ನು ತೊಡಗಿಸಿಕೊ. ರಾಮನಿಗಾಗಿ ಸೀತೆಯನ್ನು ಹುಡುಕಲು ಬಂದಿದ್ದೇನೆ; ಸೀತೆಯು ಎಲ್ಲಿರುವಳೆಂಬುದನ್ನು ತಿಳಿಸು, ಈ ಲಂಕೆಯನ್ನು ತ್ಯಜಿಸಿ ರಾಮನ ಬಳಿಗೆ ಬಾ. ರಾಮನೊಡನೆ ಗೆಳೆತನ ಬೆಳಸು’ ಎಂದನು. ವಿಭೀಷಣನೇ. ರಾಮನು ಅಪಾರ ಕರುಣಾಶಾಲಿ. ಭಕ್ತರನ್ನು ಕೈಹಿಡಿದು ಮೇಲೆತ್ತುತ್ತಾನೆ. ರಾಮಕಾರ್ಯವನ್ನು ಮಾಡಿ ಅವನ ಪ್ರೀತಿಗೆ ಪಾತ್ರನಾಗು. ಬಂಧನದಿಂದ ಮುಕ್ತನಾಗು – ಎಂದನು.

ಹೇಗೆ ಬಲಿಷ್ಠನಾದ ವಾಲಿಯನ್ನು ಬಿಟ್ಟು ನೊಂದಿದ್ದ ಸುಗ್ರೀವನು ಬಂದು ಸೇರಿದನೋ ಹಾಗೆ ವಿಭೀಷಣನೂ ಬಲಶಾಲಿಯೂ, ದುಷ್ಟನೂ ಆದ ರಾವಣನನ್ನು ತ್ಯಜಿಸಿ ರಾಮನನ್ನು ಸೇರಿದನು.

ಅತಿ ಸ್ವಲ್ಪ ಸಮಯದ ಸ್ನೇಹವು ವಿಭೀಷಣನನ್ನು ಸನ್ಮಾರ್ಗಕ್ಕೆ ಎಳೆಯಿತು. ಇದನ್ನೇ ಸತ್ಸಂಗವೆನ್ನುವುದು. ಹನುಮನ ವಿಚಾರವನ್ನು ಒಪ್ಪಿದನು. ಅವನ ಹಿತವಾದದಂತೆ ತನ್ನ ನಾಲ್ಕು ಮಂತ್ರಿಗಳೊಂದಿಗೆ ರಾಮನ ಬಳಿಗೆ ಬಂದನು. "ಎಲೈ ವಾನರರೆ, ನಾನು ರಾವಣನ ತಮ್ಮ. ನನ್ನ ಹೆಸರು ವಿಭೀಷಣ. ನಾನು ಹೆಂಡತಿ ಮಕ್ಕಳನ್ನು ತ್ಯಜಿಸಿ ಶ್ರೀರಾಮನ ಪಾದಗಳಲ್ಲಿ ಶರಣು ಹೊಕ್ಕಿದ್ದೇನೆ. ಶ್ರೀರಾಮನಿಗೆ ಶರಣು ಬಂದಿದ್ದೇನೆ. ಇದನ್ನು ರಾಮನಿಗೆ ಅರಿಕೆ ಮಾಡಿರಿ"– ಎಂದನು. ಸುಗ್ರೀವಾದಿಗಳು, ಇವನು ಶತ್ರುವಿನ ತಮ್ಮ. ನಮ್ಮ ರಹಸ್ಯವನ್ನು ತಿಳಿಯಲು ಬಂದಿದ್ದಾನೆ ಇವನನ್ನು ಸೇರಿಸಬಾರದು, ಎಂದಾಗ ರಾಮನು ಹನುಮನ ಅಭಿಪ್ರಾಯವನ್ನು ಕೇಳಿದನು.

ಶಾಸ್ತ್ರಾಭ್ಯಾಸದಿಂದ, ಉತ್ತಮ ಸಂಸ್ಕಾರವನ್ನು ಹೊಂದಿದ್ದ ಹನುಮನು, ರಾಮನಿಗೆ "ನಾನು ವಾದ ಮಾಡುವುದಿಲ್ಲ"., ಈ ವಾನರರು ಹೇಳಿದ ಅನೇಕ ಮಾತುಗಳನ್ನು ಖಂಡಿಸಬಯಸುವುದಿಲ್ಲ. ನನ್ನ ಅಭಿಪ್ರಾಯವನ್ನು ತಿಳಿಸುವೆನು. ಈ ವಿಭೀಷಣನು ರಾವಣನಲ್ಲಿರುವ ದೋಷಗಳನ್ನು ಚೆನ್ನಾಗಿ ತಿಳಿದಿರುವನು. ಹಾಗೆಯೇ ನಿನ್ನಲ್ಲಿರುವ ಸಾಧುಗುಣಗಳನ್ನೂ ತಿಳಿದಿರುವನು. ಇವನಲ್ಲಿ ವಂಚನೆಯಿಲ್ಲ. ಮುಖವು ಪ್ರಸನ್ನವಾಗಿದೆ. ವಾನರರು ಬೆದರಿಕೆ ಹಾಕಿದರೂ ಸ್ವಲ್ಪವೂ ವಿಚಲಿತನಾಗದೆ ನಿನ್ನ ಮುಂದಿರುವನು. ದುಷ್ಟನಾಗಿದ್ದರೆ ನಿನ್ನ ಮುಂದೆ ಹೀಗೆ ನಿರ್ಭಯವಾಗಿ ನಿಲ್ಲುತ್ತಿದ್ದನೆ? ಇವನಿಗೆ ಆಶ್ರಯವನ್ನು ಕೊಡುವುದರಲ್ಲಿ ದೋಷವಿಲ್ಲ. ನನ್ನ ಬುದ್ಧಿಗೆ ತೋರಿದಂತೆ ಹೇಳಿದ್ದೇನೆ. ನೀನಾದರೋ ಎಲ್ಲವನ್ನೂ ತಿಳಿದವನೂ, ಧರ್ಮವಂತನೂ, ಬುದ್ಧಿಶಾಲಿಯೂ ಆಗಿರುವೆ. ಹೇಗೆ ನಡೆದುಕೊಳ್ಳಬೇಕೆಂಬುದನ್ನು ನೀನೇ ತೀರ್ಮಾನಿಸು. ಎಂದನು. ರಾಮನು, "ಶರಣಾಗತನಾಗಿ ಬಂದು, ತಲೆತಗ್ಗಿಸಿ, ದುಃಖದಿಂದ ಕೈಜೋಡಿಸಿ, ನಿಂತವನು ಶತ್ರುವಾಗಿದ್ದರೂ, ಅವನನ್ನು ರಕ್ಷಿಸಬೇಕು. ಮರೆಹೊಕ್ಕವರನ್ನು ರಕ್ಷಿಸದೆ ಹೋದರೆ ಮಹಾದೋಷವುಂಟಾಗುವುದು" ಎಂದು ಹೇಳಿ ಮುಂದೆ ಹೋಗಿ, ಪಾದಕ್ಕೆ ವಂದಿಸಿದ ವೀಭೀಷಣನನ್ನು ಆಲಿಂಗಿಸಿಕೊಂಡನು. ಹೇ, ವಿಭೀಷಣಾ, ನಿನ್ನಂತಹ ಸಾಧು–ಸಂತರು ನನಗೆ ಬಹಳ ಪ್ರಿಯರು. ಎಲ್ಲವನ್ನೂ ತ್ಯಜಿಸಿ ನನ್ನ ಬಳಿಗೆ ಬಂದಿರುವ ನಿನಗೆ ಹೃತ್ಪೂರ್ವಕ ಸ್ವಾಗತ. ಇನ್ನು ನಿರ್ಭಯವಾಗಿರು. – ಎಂದು ಹೇಳಿ, "ಲಕ್ಷ್ಮಣಾ, ಪವಿತ್ರವಾದ ಸಮುದ್ರದ ಜಲವನ್ನು ತಾ. ಇನ್ನು ಮುಂದೆ ಇವನೇ ಲಂಕೆಯ ಸಮಸ್ತ ರಾಕ್ಷಸರಿಗೂ ರಾಜನೆಂದು ಘೋಷಿಸು". ಎಂದು ಹೇಳಿ, ಕಪಿವೀರರು ತಂದ ಸಮುದ್ರ ಜಲದಿಂದ, ಅಭಿಷೇಕ ಮಾಡಿ, ಸಮಸ್ತ ವಾನರರ ನಡುವೆ, ವಿಭೀಷಣನಿಗೆ ಲಂಕಾರಾಜ್ಯದ ಪಟ್ಟ ಕಟ್ಟಿದನು. ಹೀಗೆ ವಿಭೀಷಣನು ಹನುಮನ ಮಾತಿನಂತೆ ನಡೆದು ಲಂಕೆಗೇ ರಾಜನಾದನು. ಹನುಮನ ಹಿತವಾದವನ್ನು ಕೇಳದ ರಾವಣನು ರಾಮನಿಂದ ನಾಶವಾದನು. ಹೀಗೆ ಹನುಮನು ಯಾರು ತನ್ನ ಸ್ನೇಹ ಬಯಸುವರೋ, ಎಲ್ಲಿ ಸಾತ್ವಿಕ ತನವಿರುವುದೋ ಅಂತಹವರಿಗೆ ಔನ್ನತ್ಯವನ್ನು ತರುವ ಉಪಕಾರದ ಕೆಲಸವನ್ನು ಮಾಡಿದನು.

## ನವರಾತ್ರಿ ಕಾರ್ಯಕ್ರಮ

**ಬೆಂಗಳೂರು :** (ಕಬ್ಬನ್‌ಪೇಟೆ ಪ್ರಖಂಡ) ಅಶ್ವಯುಜದ ಪಾಡ್ಯಮಿಯಿಂದ ದಶಮಿಯ ಹತ್ತು ದಿನಗಳಲ್ಲಿ ನವರಾತ್ರಿ ಗೊಂಬೆಗಳನ್ನಿಟ್ಟ ಮನೆಗಳಿಗೆಲ್ಲ ಹೋಗಿ ಸತ್ಸಂಗದ 40.45 ಮಂದಿ ಭಗಿನಿಯರು ವಿಷ್ಣು ಸಹಸ್ರನಾಮ ಹಾಗೂ ಲಲಿತಾ ಸಹಸ್ರನಾಮಗಳ ಪಾರಾಯಣ ಮಾಡಿದರು. ಎಲ್ಲಾ ಮನೆಗಳೂ ಈ ವಿಶಿಷ್ಟ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂತೋಷಪಟ್ಟರು.

**– ಲತಾ ವೇಣುಗೋಪಾಲ್**

ಭೋಪಾಲ : ಮಧ್ಯಪ್ರದೇಶದ ರಾಜಧಾನಿ ಭೂಪಾಲನಗರದಲ್ಲಿ ದಿನಾಂಕ 13.09.2011 ರಿಂದ 17.09.2011ರವರೆಗೆ ಅಖಿಲ ಭಾರತೀಯ ಸತ್ಸಂಗ ಪ್ರಶಿಕ್ಷಣವರ್ಗ ನಡೆಯಿತು. ನಗರದ ಹೊರಭಾಗದಲ್ಲಿ ಹೆಸರಿನಂತೆಯೇ ಸುಂದರವಾದ 'ಸುಂದರವನ ನರ್ಸರಿ' ಎಂಬ ವಿಶಾಲ ತೋಟದ ಮಧ್ಯೆ ಇರುವ ಕಟ್ಟಡದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಂಪೂರ್ಣ ಭಾರತದ ಸಂಸ್ಕೃತಿಯ ದರ್ಶನವೇ ಅಲ್ಲಿ ಆಗುವಂತೆ ದೇಶದ ಎಲ್ಲಾ ಭಾಗಗಳಿಂದ ಪರಿಷದ್ ಕಾರ್ಯಕರ್ತರು, ಅಧಿಕಾರಿಗಳು ಹಾಗೂ ಸ್ವಯಂ ಸೇವಕರು ಅಲ್ಲಿ ನೆರೆದಿದ್ದರು. ಶಿಕ್ಷಾರ್ಥಿಗಳ ಸಂಖ್ಯೆ ಸುಮಾರು ನೂರರಷ್ಟಿದ್ದರೆ, ಅಧಿಕಾರಿಗಳು ಮತ್ತು ಸ್ವಯಂಸೇವಕರ ಸಂಖ್ಯೆಯೂ ಅಷ್ಟೇ ಇತ್ತು. ಕರ್ನಾಟಕದಿಂದ ಒಟ್ಟು ಎಂಟು ಮಂದಿ ಈ ಕಾರ್ಯಕ್ರಮಕ್ಕೆ ಹೋಗಿದ್ದೆವು.

# ಅಖಿಲ ಭಾರತೀಯ ಸತ್ಸಂಗ ಪ್ರಶಿಕ್ಷಣವರ್ಗ

–ಬಿ.ಈ. ಸೀತಾಲಕ್ಷ್ಮಿ, ಬೆಂಗಳೂರು

13.09.2011ರ ಮಧ್ಯಾಹ್ನ 3.00 ಗಂಟೆಗೆ ವಿ.ಹಿಂ.ಪ.ನ ಮಹಾ ಕಾರ್ಯದರ್ಶಿ ಶ್ರೀಮಾನ್ ಪ್ರವೀಣ್ ಭಾಯಿ ತೊಗಾಡಿಯಾ ಜೀರವರಿಂದ ಈ ವರ್ಗ ಉದ್ಘಾಟಿಸಲ್ಪಟ್ಟಿತು. ಸತ್ಸಂಗದ ಅರ್ಥ, ಉದ್ದೇಶ, ಕಾರ್ಯವಿಧಾನ, ಸಮಾಜದ ಮೇಲೆ ಇದರ ಪರಿಣಾಮವನ್ನು ತೋಗಾಡಿಯಾಜೀ ಯವರು ಎಳೆಎಳೆಯಾಗಿ ಮನಮುಟ್ಟುವಂತೆ ವಿವರಿಸಿದರು. 'ಮಾನವ ಕಲ್ಯಾಣಕ್ಕಾಗಿ ಸತ್ಸಂಗ' ಎಂದು ವಿಷದಪಡಿಸಿದರು.

ಅಖಿಲಭಾರತೀಯ ಸತ್ಸಂಗ ಪ್ರಮುಖ ರಾದ ಶ್ರೀವಸಂತ ರಥಜೀ, ಸಂಘಟನಾ ಮಹಾ ಕಾರ್ಯದರ್ಶಿಗಳಾದ ಶ್ರೀ ದಿನೇಶ್‌ಚಂದ್ರಜಿ, ಪೂರ್ವ ಮತ್ತು ದಕ್ಷಿಣ ಭಾರತದ ಸಂಯುಕ್ತ ಮಹಾಮಂತ್ರಿ ಶ್ರೀ ರಾಘವುಲುಜೀ, ಮಾನ್ಯ ವಿನಾಯಕರಾವ್ ದೇಶಪಾಂಡೆ, ಶ್ರೀಮಾನ್ ಸಪನದಾಸ ಮೂಖರ್ಜಿ ಮುಂತಾದ ಅಧಿಕಾರಿಗಳ ಸಹಚರ್ಯ ಮತ್ತು ಮಾರ್ಗದರ್ಶನ ಐದು ದಿನಗಳ ಕಾಲ ನಮಗೆ ದೊರಕಿದುದು ನಮ್ಮ ಭಾಗ್ಯವೇ ಸರಿ.

ಆದರ್ಶ ಹಿಂದೂ ಪರಿವಾರದ ರೀತಿ–ನೀತಿಗಳು, ವ್ಯಕ್ತಿಗತ ಆಚಾರ–ವಿಚಾರ, ಇವುಗಳ ಪರಿಪಾಲನೆ, 'ಹಿಂದೂ ಮನೆ' ಹೇಗಿರಬೇಕು ಎಂಬ ವಿಷಯಗಳ ಬಗ್ಗೆ ಶ್ರೀ ದಿನೇಶ್‌ಜೀಯವರು ಮಾಹಿತಿ ನೀಡಿದರು. ಶ್ರೀ ವಿನಾಯಕರಾವ್ ದೇಶಪಾಂಡೆಯವರು "ಹಿಂದೂಧರ್ಮದ ಉಳಿಯುವಿಕೆ ಮತ್ತು ರಾಷ್ಟ್ರ ಜಾಗರಣೆಯಲ್ಲಿ ಭಕ್ತಿ ಪರಂಪರೆಯ ಕೊಡುಗೆ" ಎಂಬ ವಿಚಾರದ ಬಗ್ಗೆ ಮನಮುಟ್ಟುವಂತೆ ವಿವರಿಸಿದರು. ನಮ್ಮ ಧರ್ಮದ ಮೇಲೆ ಆಕ್ರಮಣ ನಡೆದಾಗಲೆಲ್ಲಾ ಸಾಧು–ಸಂತರು, ಸನ್ಯಾಸಿಗಳು ಹೇಗೆ ಇದನ್ನು ಕಾಪಾಡಿದ್ದಾರೆ ಎಂಬುದನ್ನು ಸೋದಾಹರಣವಾಗಿ ವಿವರಿಸಿದರು. ದೇವಭಕ್ತಿ ಮತ್ತು ದೇಶಭಕ್ತಿಯ ಸಮನ್ವಯವೇ ಸಾಪ್ತಾಹಿಕ ಸತ್ಸಂಗ. ಇದು



**ಕರ್ನಾಟಕದ ಶಿಕ್ಷಾರ್ಥಿಗಳು ಉಜ್ಜಯನಿಯ ಮಹಾಂಕಾಲ ದೇವಸ್ಥಾನದ ಪರಿಸರದಲ್ಲಿ**

ವಿ.ಹಿಂ.ಪ.ನ ಆದರ್ಶ ಪರಿಕಲ್ಪನೆ. 'ಲೋಕಕಲ್ಯಾಣವೇ ಧರ್ಮ', 'ಧರ್ಮಕ್ಕಾಗಿ ಬದುಕಿ, ದೇಶಕ್ಕಾಗಿ ಬದುಕಿ' ಎಂಬ ನೀತಿ ಸಂಹಿತೆಯನ್ನು ಪುನರುಚ್ಚರಿಸುತ್ತಾ ನಮ್ಮ ದೇಶದ ನಾನಾ ಧಾರ್ಮಿಕ ಹಬ್ಬಗಳು, ಅವುಗಳ ಆಚರಣೆ, ವೈಜ್ಞಾನಿಕ ಕಾರಣಗಳನ್ನು ಶ್ರೀ ರಾಘವುಲುಜೀ ವಿವರಿಸಿದರು. ಸಮಾಜದ ಕಲ್ಯಾಣದಲ್ಲಿಯೇ ಮಾನವನ ಕಲ್ಯಾಣವಿದೆ ಎಂಬ ವಿಷಯವನ್ನು ಮನದಟ್ಟು ಮಾಡಿಸುವಲ್ಲಿ ಸಫಲರಾದರು. ಕಡೆಯಲ್ಲಿ ಅವರು ಸಂಘಟಕರಿಗೆ ಇರಬೇಕಾದ ನಾಲ್ಕು ಗುಣಗಳನ್ನು ತಿಳಿಸಿದರು. ಇವೆಂದರೆ 1. ಪರನಿಂದೆ ಮಾಡಬಾರದು, 2. ಆತ್ಮಸ್ತುತಿ ಬೇಡ 3. ಯೋಗ್ಯತೆಗೆ ಅಭಿನಂದಿಸಿ 4. ದೋಷವನ್ನು ಏಕಾಂತದಲ್ಲಿ ತಿಳಿಸಿ.

ಹಿಂದೂವ್ಯಕ್ತಿಯ ವಿಶೇಷತೆ, ಹಿಂದೂ ಮನೆಯ ಗುರುತು, ಅಷ್ಟಾಂಗ ಯೋಗ, ಹಿಂದೂ ಸಂಸ್ಕೃತಿಯ ಮಹತ್ವ. 'ಮಹಿಳೆ ಮತ್ತು ಸತ್ಸಂಗ, ಸತ್ಸಂಗ ನಡೆಸುವ ವಿಧಾನ ಮುಂತಾದ ವಿಷಯಗಳ ಬಗ್ಗೆ ನಮಗೆ ವಿವರ ನೀಡಲಾಯಿತು. ಇವೆಲ್ಲಾ ನಮಗೆ ದೊರೆತ ಬೌದ್ಧಿಕ್‌ನ ಭಾಗವಾಗಿದ್ದವು.

ಬೌದ್ಧಿಕ್‌ಗಳಲ್ಲವೆ ನಮಗೆ ಸತ್ಸಂಗದ ಕಾರ್ಯಾಗಾರ, ಪ್ರಾತ್ಯಕ್ಷಿಕೆಗಳೂ ಇದ್ದವು. ಪ್ರತಿದಿನ ಸಂಜೆ ಹಾಡು, ಭಜನೆ, ವಾದ್ಯಗಳೊಡನೆ ಭಕ್ತಿಭಾವದಿಂದ ನಡೆಸಿದ ನರ್ತನ ಎಲ್ಲರ ಮನವನ್ನೂ ಸೂರೆಗೊಂಡವು. ಐದು ಭಜನೆ, ಐದು ದೇಶಭಕ್ತಿಗೀತೆ, ಐದು ಚಾಪಾಯಿ, ಐದು ಸುಭಾಷಿತಗಳನ್ನು ಪ್ರತಿಯೊಂದೂ ದಿನಕ್ಕೊಂದರಂತೆ ನಮಗೆ ಕಲಿಸಿದರು. ಭೂಪಾಲ್ ನಗರದ ದೇವಾಲಯವೊಂದರಲ್ಲಿ ಸಾಮೂಹಿಕ ಸತ್ಸಂಗ ಕಾರ್ಯಕ್ರಮವೂ ನಗರ ಸಂಕೀರ್ತನೆಯೊಡನೆ ನಡೆಯಿತು. 17.09.11ರಂದು ಬೆಳಿಗ್ಗೆ 'ಸಂಕಲ್ಪಯಜ್ಞ' ನಡೆಯಿತು. ಸಂಜೆ ಸಮಾರೋಪ ಸಮಾರಂಭದೊಡನೆ ಪ್ರಶಿಕ್ಷಣವರ್ಗ ಮುಕ್ತಾಯವಾಯಿತು.

# ಶ್ರೀ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರ

– ಪಾರಿಜಾತ ಮೋಹನ್ ಬಿ.ಎಸ್, ಬೆಂಗಳೂರು
Paravimona@gmail.com



ಜೀವನದಲ್ಲಿ ಸುಖ, ಶಾಂತಿ, ಸದ್ಗುಣ, ಉತ್ತಮ ಭವಿಷ್ಯ ಹಾಗೂ ಮೋಕ್ಷಗಳನ್ನು ಪಡೆಯಲು ಮನುಷ್ಯನು ಬಹು ಹಿಂದಿನ ಕಾಲದಿಂದಲೂ ಜಪ,ತಪ, ಹೋಮಹವನಗಳನ್ನು ಮಾಡುತ್ತಾ ಬಂದಿದ್ದಾನೆ. 'ವಿಪತ್ತು' ಎದುರಾದಾಗ ಸಹಜವಾಗಿಯೇ ಧಾರ್ಮಿಕತೆಯತ್ತ ಹೆಚ್ಚಾಗಿ ವಾಲುತ್ತಾನೆ. ಭಗವಂತನ ಸಾನಿಧ್ಯವಿರುವ ಪವಿತ್ರ ತಾಣಗಳನ್ನು ಕ್ಷೇತ್ರಗಳನ್ನು ಹುಡುಕುತ್ತಾ ಯಾತ್ರೆಯನ್ನು ಮಾಡುತ್ತಾನೆ. ತನ್ನ ಇಷ್ಟಾರ್ಥಗಳನ್ನು ನೆರವೇರಿಸುವಂತೆ ಬೇಡುತ್ತಾನೆ. ಯಾತ್ರೆಯು ಮನಸ್ಸಿಗೆ ಆನಂದದ ಜೊತೆಗೆ ಆಧ್ಯಾತ್ಮಿಕ ಅನುಭೂತಿಯನ್ನು ಶಾಂತಿ, ಭರವಸೆಯನ್ನು ನೀಡುತ್ತದೆ. ಇಂತಹ ಅಭಯಗಳನ್ನು ಪ್ರಸಾದಿಸುವ ಪವಿತ್ರ ಯಾತ್ರಾ ಸ್ಥಳಗಳಲ್ಲಿ **ಶ್ರೀ ಕುಕ್ಕೆ ಸುಬ್ರಮಣ್ಯ ಕ್ಷೇತ್ರವು** ಒಂದಾಗಿದೆ.




ಜೀವನದಲ್ಲಿ ಕಾಡುವ ಸಂತಾನ ಹೀನತೆ ಚರ್ಮವ್ಯಾಧಿಯಂತಹ ಅನೇಕ ವ್ಯಾಧಿಗಳಿಗೆ ಸರ್ಪದೋಷವೇ ಕಾರಣ ಎಂಬ ನಂಬಿಕೆ ಎಲ್ಲರಲ್ಲೂ ಇದೆ. ಇಂತಹ 'ಸರ್ಪದೋಷ' ನಿವಾರಣಾ ಕೇಂದ್ರವೆಂದು ಜನರು ನಂಬಿರುವ ಪ್ರಮುಖ ಕ್ಷೇತ್ರವೇ "ಶ್ರೀ ಕುಕ್ಕೆ ಸುಬ್ರಮಣ್ಯ".

ಸ್ಕಂಧ, ಕೃತ್ತಿಕಾ, ಗುಹ, ಫಾಲನೇತ್ರ ಸುತ, ಎಂದೆಲ್ಲಾ ನಾಮಾಂಕಿತನಾದ ಶ್ರೀ ಸುಬ್ರಹ್ಮಣ್ಯ ಸ್ವಾಮಿಯು ಈ ಕ್ಷೇತ್ರದಲ್ಲಿ ನೆಲೆನಿಂತು ನಾಗ ಸ್ವರೂಪಿಯಾಗಿ ಆಸ್ತಿಕರು ಮತ್ತು ನಿಸರ್ಗ ಪ್ರಿಯರಿಬ್ಬರ ಆಕರ್ಷಣೀಯ ತಾಣವಾದ ಪ್ರಕೃತಿಯ ಮಡಿಲಲ್ಲಿ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುತ್ತಿದ್ದಾನೆ.

## ಸ್ಥಳ ಪುರಾಣ

ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ "ಸುಳ್ಯ' ತಾಲೂಕಿನಲ್ಲಿರುವ ಈ ಕ್ಷೇತ್ರವು ಪಶ್ಚಿಮ ಘಟ್ಟಗಳ ಮಡಿಲಲ್ಲಿರುವ ಪ್ರಸಿದ್ಧ ಕ್ಷೇತ್ರಗಳಲ್ಲಿ ಒಂದಾಗಿದೆ. ಇಲ್ಲಿ ಹಿಂದೆ ಸರ್ಪರಾಜನಾದ ವಾಸುಕಿ ತಪಸ್ಸು ಮಾಡಿದ್ದನೆಂಬ ನಂಬಿಕೆಯಿಂದ ಇಲ್ಲಿ ಸ್ವಾಮಿಯನ್ನು ನಾಗ ಸ್ವರೂಪಿಯಾಗಿ ಪೂಜಿಸುವ ವಾಡಿಕೆಯಿದೆ ಕರ್ನಾಟಕದ ಕುಕ್ಕೆ, ನಾಗಲಮಡಿಕೆ, ಘಾಟಿಗಳು, ಸುಬ್ರಮಣ್ಯ ಕ್ಷೇತ್ರಗಳಲ್ಲೇ ಪ್ರಮುಖವಾದವು. ಶ್ರೀ ಕುಕ್ಕೆ ಕ್ಷೇತ್ರವು ಬೆಂಗಳೂರಿನಿಂದ ಸುಮಾರು 266 ಕಿ.ಮೀ. ದೂರದಲ್ಲಿದೆ.

**ಇಲ್ಲಿಯ ಪ್ರಮುಖ ಭಕ್ತಿ ತಾಣಗಳು**

**1. ದರ್ಪಣ ತೀರ್ಥ**



ಹೆಸರೇ ಸೂಚಿಸುವಂತೆ ವಿಶೇಷ ಗುಣ ವಿಶೇಷತೆ ಹೊಂದಿರುವ ಈ ತೀರ್ಥದಲ್ಲಿ ಸ್ನಾನ ಮಾಡಿ ನಂತರ ಸ್ವಾಮಿ ಆದಿ ಸುಬ್ರಹ್ಮಣ್ಯನ ದರ್ಶನ ಮಾಡುವುದು ಇಲ್ಲಿನ ಪದ್ಧತಿ.



**2. ಆದಿ ಸುಬ್ರಹ್ಮಣ್ಯ ದೇವಾಲಯ**

ಈ ದೇವಾಲಯವು ಮೂಲ ಸುಬ್ರಹ್ಮಣ್ಯ ದೇವಾಲಯದ ಶಿಖರದ ಉತ್ತರ ಭಾಗದಲ್ಲಿದೆ. ದೇವಾಲಯದ ಹೊರಾಂಗಣವು ವಿಶಾಲವಾಗಿದ್ದು, ಗರ್ಭಗುಡಿಯಲ್ಲಿ ವಲ್ಮೀಕ (ಹುತ್ತ) ವನ್ನು ಒಳಗೊಂಡಿದೆ. ಈ ಕ್ಷೇತ್ರದಲ್ಲಿ ಆಚಾರ ಸಂಪ್ರದಾಯಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ ಯಾತ್ರಿಕರು ಒದ್ದೆ ಬಟ್ಟೆಯುಟ್ಟು ಇಲ್ಲಿ ಹೆಜ್ಜೆ ನಮಸ್ಕಾರ, ಉರುಳುಸೇವೆ, ಹರಕೆ ಇತ್ಯಾದಿ ಕೈಂಕರ್ಯದಲ್ಲಿ ತೊಡಗುತ್ತಾರೆ.




**3. ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ**

"ಭಜೇ ಕುಕ್ಕೇ ಲಿಂಗಮ್" ಎಂದು ಶ್ರೀಶಂಕರ ಭಗವತ್ಪಾದರು ಸುಬ್ರಹ್ಮಣ್ಯ ಭುಜಂಗ ಸ್ತೋತ್ರದಲ್ಲಿ ಹಾಡಿ ಹೊಗಳಿದ್ದಾರೆ. ಈ ದೇವಾಲಯದ ಪ್ರವೇಶದ್ವಾರ

ಪಶ್ಚಿಮಕ್ಕಿದೆ. ಗರ್ಭಗುಡಿಯಲ್ಲಿ ಮೂರು ಮುಖ್ಯ ಪೀಠಗಳಿದ್ದು ಸುಬ್ರಹ್ಮಣ್ಯ ಸ್ವಾಮಿ ಮೇಲಿನ ಪೀಠದಲ್ಲಿ, ವಾಸುಕಿ ಹಾಗೂ ಶೇಷ ದೇವರುಗಳು ಕ್ರಮವಾಗಿ ನಂತರದ ಪೀಠಗಳಲ್ಲಿ ವಿರಾಜಮಾನರಾಗಿದ್ದಾರೆ. ದೇವಾಲಯದ ಪ್ರಾಂಗಣವು ವಿಶಾಲವಾಗಿದ್ದು ಭಕ್ತರು ತಮ್ಮ ಹರಕೆ ತೀರಿಸಲು ಉಷಃ ಕಾಲದಲ್ಲಿ ಇಲ್ಲಿ ಉರುಳು ಪ್ರದಕ್ಷಿಣೆ ಹಾಕುವ ರೂಢಿಯಿದೆ. ಸ್ವಾಮಿಯ ದರ್ಶನದ ನಂತರ ಪ್ರದಕ್ಷಿಣೆ ಬಂದು ಒಳ ಪ್ರಾಂಗಣದ ಕುಕ್ಕೆ ಲಿಂಗವನ್ನು ಪೂಜಿಸಿ, ದಕ್ಷಿಣ ಭಾಗದ ಭೈರವನಿಗೆ ಪ್ರಾರ್ಥಿಸುತ್ತಾರೆ. ಆಶ್ಲೇಷ ಬಲಿ ಎನ್ನುವ ನಾಗ ಸೇವೆಗೆ ಮುಂಚಿತವಾಗಿ ಹಾಜರಿದ್ದು ಸಂಕಲ್ಪ ಮಂಟಪದಲ್ಲಿ ಸಂಕಲ್ಪ ಮಾಡಿಸುವುದು ಇಲ್ಲಿನ ಪದ್ಧತಿಯಾಗಿದೆ.

**4. ಬಿಲದ್ವಾರ**

ಕುಮಾರ ಧಾರಾಕ್ಕೆ ಸಾಗುವ ದಾರಿಯಲ್ಲಿ ಈ ಸ್ಥಳವಿದೆ ಹಿಂದೆ ಸರ್ಪರಾಜ ವಾಸುಕಿಯು ಗರುಡನಿಂದ ತಪ್ಪಿಸಿಕೊಳ್ಳಲು ಇಲ್ಲಿ ಅವಿತಿದ್ದನೆಂದು ನಂಬಿಕೆಯಿದೆ.



**5. ಕಾಶಿಕಟ್ಟೆ ಗಣಪತಿ**

ಮೂಲ ದೇವಾಲಯದಿಂದ ಕುಮಾರ ಧಾರಕ್ಕೆ ಹೋಗುವ ಮಾರ್ಗ ಮಧ್ಯೆ ನಾರದ ಮಹರ್ಷಿಯಿಂದ ಪ್ರತಿಷ್ಠಾಪಿಸಲ್ಪಟ್ಟಿರುವ ಶ್ರೀಗಣಪತಿಯ ದರ್ಶನ ದೊರೆಯುತ್ತದೆ.

**6. ಕುಮಾರಧಾರ**

ಸುಂದರ ನಯನ ಮನೋಹರ ಪ್ರಕೃತಿಯ ಸೊಬಗನ್ನು ಹೊಂದಿರುವ ವನಗಳಿಂದ ಕೂಡಿದ "ಕುಮಾರ ಪರ್ವತದ" ಮಡಿಲಲ್ಲಿ ಹರಿಯುವ ಬಳುಕಿನ ಜಲಧಾರೆಯೆ "ಕುಮಾರ ಧಾರೆ" ಬಿಲ್ವ ದ್ವಾರದ ದರ್ಶನದ ನಂತರ 21 ಅಡಿ ಎತ್ತರದ ಗಣಪತಿ ಆಲಯದ ವೀಕ್ಷಣೆ ಮಾಡಿ ಮುನ್ನಡೆದರೆ ಗಿಡಮೂಲಿಕೆಗಳಿಂದ ಕೂಡಿದ ವನಸಿರಿಯ ನಡುವೆ ಈ ಕುಮಾರಧಾರ ಜಲರಾಶಿಯ ಸೊಬಗು ಆಕರ್ಷಿಸುತ್ತದೆ. ಈ ಸ್ಥಳದಲ್ಲಿ ಸ್ನಾನ ಮಾಡಿದರೆ ಚರ್ಮವ್ಯಾಧಿ ನಿವಾರಣೆಯಾಗುತ್ತದೆಂಬುದು ನಂಬಿಕೆ.

**7. ಪಂಚಮಿ ತೀರ್ಥ**

1.5 ಕಿ.ಮೀ ದೂರದಲ್ಲಿರುವ ಈ ಸ್ಥಳವು ಕುಮಾರಧಾರಾದ ಎಡ ಭಾಗದಲ್ಲಿದೆ. ಈ ಪ್ರದೇಶದಲ್ಲಿ ಇಲ್ಲಿಯ ಮಠದ ಪೂರ್ವಯತಿಗಳ ಬೃಂದಾವನವನ್ನು ಹಾಗೂ ಸೋಮನಾಥ ದೇವರ ದರ್ಶನವನ್ನು ಪಡೆಯಬಹುದಾಗಿದೆ.

**8. ಸಂಪುಟ ನಾರಸಿಂಹ**

ಈ ಸ್ಥಳವು ಮೂಲ ಸುಬ್ರಹ್ಮಣ್ಯ ದೇವಾಲಯದ ಪಕ್ಕದಲ್ಲಿದೆ. ಮಧ್ವಾಚಾರ್ಯರಿಗೆ ವೇದವ್ಯಾಸರು ನೀಡಿದ ನರಸಿಂಹ ದೇವರ ವಿಗ್ರಹದ ದರ್ಶನ ಭಾಗ್ಯವು ಇಲ್ಲಿ ದೊರೆಯುತ್ತದೆ.




**ಯಾತ್ರಿಕರಿಗೆ ವಿಶೇಷ ಮಾಹಿತಿಗಳು**

1. **ವಿಶೇಷ ಪೂಜೆ :** ಮಹಾಮಂಗಳಾರತಿ ಮಧ್ಯಾಹ್ನ 12.30ಕ್ಕೆ ಆಶ್ಲೇಷ ಬಲಿ ಬೆಳಿಗ್ಗೆ 7 ರಿಂದ 9ರವರೆಗೆ. ನಾಗ ಪತ್ರಿಷ್ಠೆ 12 ಕ್ಕೆ.
2. **ದರ್ಶನ ಸಮಯ :** ಪ್ರತಿನಿತ್ಯ ಬೆಳಿಗ್ಗೆ 7 ರಿಂದ 1.30ರವರೆಗೆ ಮಧ್ಯಾಹ್ನ : 3.30ರಿಂದ ರಾತ್ರಿ 8ರವರೆಗೆ ಭೋಜನ ವ್ಯವಸ್ಥೆಯಿರುತ್ತದೆ.
4. **ವಸತಿ ಸೌಕರ್ಯ :** ದೇವಾಲಯ ಹಾಗೂ ಖಾಸಗೀ ವಸತಿಗೃಹಗಳ ವ್ಯವಸ್ಥೆ ಇದೆ.
5. ಬೆಂಗಳೂರಿನಿಂದ ಸುಮಾರು 266 ಕಿ.ಮೀ ದೂರವಿರುವ ಈ ಕ್ಷೇತ್ರಕ್ಕೆ ಕೆ.ಎಸ್.ಆರ್.ಟಿ.ಸಿ ಬಸ್‌ಗಳ ವ್ಯವಸ್ಥೆ ಇದೆ.
6. **ಇಲ್ಲಿಗೆ ಸಮೀಪವಿರುವ ಇತರೆ ಪ್ರೇಕ್ಷಣೀಯ ಸ್ಥಳಗಳು**
   1. **ಧರ್ಮಸ್ಥಳ** – 70 ಕಿ.ಮೀ ದೂರದಲ್ಲಿದೆ
   2. **ಬಿಸಿಲೇಘಾಟ್** – 3 ಕಿ.ಮೀ. ಕುಲಕುಂದ) ಸಕಲೇಶಪುರಮಾರ್ಗ
   3. **ಮತ್ಸ್ಯಗುಂಡಿ** – (ಯಾನೇಕಲ್) 7 ಕಿ.ಮೀ. ದೂರದಲ್ಲಿದೆ



# ಸಂಘಟನಾ ಸೂತ್ರದ ಸುಂದರ ಮಾಹಿತಿ 'ಸದಾನಂದ'




– ಜ.ರಾ. ರಾಮಮೂರ್ತಿ ಚಿತ್ರದುರ್ಗ

ಮಾನ್ಯ ಸದಾನಂದಜೀ ಕಾಕಡೆಯವರ ಸ್ಮರಣಸಂಚಿಕೆ 'ಸದಾನಂದ' ಸ್ಮರಣೀಯವೂ, ಸಂಗ್ರಾಹ್ಯವೂ ಆಗಿದೆ. ಅಚ್ಚುಕಟ್ಟಾಗಿ ಹೊರಹೊಮ್ಮಿದೆ. ಎಲ್ಲಾ ಲೇಖನಗಳೂ ಸ್ವಾನುಭವದ ವಿವರಣೆಗಳಾಗಿರುವುದರಿಂದ ಸ್ವಾರಸ್ಯಕರವಾಗಿವೆ. ಪರಿವಿಡಿ ಹಾಗೂ ಪುಟ ಸಂಖ್ಯೆಗಳನ್ನು ನಮೂದಿಸಿದ ವಿನ್ಯಾಸವು ಹೊಸರೂಪದಲ್ಲಿದ್ದು ಓದುಗ ಸ್ನೇಹಿಯಾಗಿದೆ. ಲೇಖನಗಳ ಓರಣವು ಕೂಡಾ ಸದಾನಂದಜಿಯವರ ಸೌಂದರ್ಯ ಪ್ರಜ್ಞೆಗೆ ತಕ್ಕುದಾಗಿದೆ. ಹೀಗೆ ಕಲಾತ್ಮಕ ರಕ್ಷಾಪುಟದ ಸದಾನಂದದ ಹೊರರೂಪವು ಮುದ್ದಾಗಿ ಆಕರ್ಷಣೀಯವಾಗಿದೆ.

ಇನ್ನು ಹೂರಣದ ಬಗ್ಗೆ. ಶ್ರೀ ಬಾಬೂರಾವ್ ದೇಸಾಯಿಯವರ ಲೇಖನವು ಸದಾನಂದಜಿಯವರ ಜೀವನವನ್ನು ಅಖಂಡದೃಷ್ಟಿಯಿಂದ ಕಂಡು ವಿಶ್ಲೇಷಿಸಿದೆ. ವಿಶ್ವಹಿಂದು ಪರಿಷದ್ ದೇಶದಲ್ಲೆಲ್ಲಾ ಸ್ವಂತ ಕಟ್ಟಡವನ್ನು ಹೊಂದಿಲ್ಲದ ಕಾಲದಲ್ಲಿ ಕರ್ನಾಟಕದಲ್ಲಿ ಪ್ರಾಂತ ಕಾರ್ಯಾಲಯವನ್ನು ನಿರ್ಮಿಸಿದ ಸದಾನಂದಜಿಯವರ ಕರ್ತತ್ವವೂ ದೂರದೃಷ್ಟಿಯೂ ಕಾರ್ಯಕರ್ತರೆಲ್ಲರಿಗೂ ಮಾದರಿಯಾಗುವಂತಿದೆ.

ಸದಾನಂದಜಿ ಸದಾ ಗೌರವಿಸಿದ ಧರ್ಮಾಚಾರ್ಯರೂ, ಮಹಿಳಾ ಕಾರ್ಯಕರ್ತರ, ಸಂಘದ ಹಿರಿಯರ, ಪರಿಷದ್‌ನ ಹಿರಿ–ಕಿರಿಯ ಸಂಗಾತಿಗಳ ಲೇಖನಗಳು ವಿವಿಧ ಗುಚ್ಛಗಳಾಗಿ ವಿಭಾಗಿಸಲ್ಪಟ್ಟು ಆಯಾ ಪರಿಸರದಲ್ಲಿ ಸದಾನಂದಜಿ ಮೂಡಿಸಿದ ಛಾಪನ್ನು ಬಿಂಬಿಸುತ್ತಿವೆ. ಭಾವಚಿತ್ರಗಳ ವಿಭಾಗವಂತೂ ಸದಾನಂದಜಿಯವರ ಪ್ರಭಾವದ ಕಾಲ–ದೇಶಗಳ ಪರಿಮಾಣದ ಉತ್ತಮ ಸಂಯೋಜನೆಯೆನಿಸುತ್ತದೆ.

ಮುದ್ರಣದ ಹಂತಗಳಲ್ಲಿ, ಕರಡು ಪ್ರತಿಯನ್ನು ತಿದ್ದುವಲ್ಲಿ ಹುಡುಕಿದರೂ ತಪ್ಪುಗಳು ಕಾಣಸಿಗದಿರುವಂತಹ ಉತ್ಕೃಷ್ಟತೆಯನ್ನು ಗೌರವ ಸಂಪಾದಕರ ಜೊತೆಗಾರರು

ಕಾಪಾಡಿಕೊಂಡಿರುವರು. ಲೇಖನಗಳ, ಭಾವಚಿತ್ರಗಳ ಶೀರ್ಷಿಕೆಗಳು, ಸಹಜವಾಗಿ ಗಮನ ಸೆಳೆಯುವ ನುಡಿಕಟ್ಟುಗಳ ಸಮೂಹವಾಗಿವೆ. ಕರ್ನಾಟಕದಲ್ಲಿ ಆಗಿ ಹೋದ ಸಮಾಜಸೇವಕರ ಸಾಲಿನಲ್ಲಿ ಅರ್ಹ ಸ್ಥಾನವನ್ನು ಗಳಿಸಿದ ಸದಾನಂದಜಿ ಕಾಕಡೆಯವರ ಈ ಜೀವನಚಿತ್ರವು ಎರಡು ತಲೆಮಾರುಗಳ ಕಾಲ ನಡೆದ ಮಹತ್ವದ ಘಟನೆಗಳ ಹಾಗೂ ರಾಷ್ಟ್ರವಾದಿ ಸಮೂಹವೊಂದು ಅದಕ್ಕೆ ಪ್ರತಿಕ್ರಿಯಿಸಿದ ವಿಶಿಷ್ಟ ಬಗೆಯನ್ನು ಸುಂದರವಾಗಿ ಚಿತ್ರೀಕರಿಸಿದೆ. ಒಂದು ಕಾಲ ಘಟ್ಟದ ಸಮಾಜಶಾಸ್ತ್ರದ ಸೈದ್ಧಾಂತಿಕ ಎಳೆಯನ್ನು ಪರಿಚಯಿಸುವ ಈ ಪುಸ್ತಕವು ಪುಸ್ತಕ ಲೋಕಕ್ಕೆ ಅಮೂಲ್ಯ ಕೊಡುಗೆ. ಅಕ್ಷರ ಜೀವನವೊಂದಕ್ಕೆ ಅಕ್ಷರಗಳ ಶ್ರದ್ಧಾಂಜಲಿ. ಸಂಚಿಕೆಯ ಆಯ್ದ ಲೇಖನಗಳನ್ನ ನವೆಂಬರ್ ತಿಂಗಳ ಹಿಂದುವಾಣಿಯಲ್ಲಿ ಪ್ರಕಟಿಸಿರುವುದು ಕೂಡ ಒಂದು ಸುಂದರ ಯೋಚನೆ

**ಒಂದು ನಿರೀಕ್ಷೆ :** ಸದಾನಂದಜಿಯವರ ಕೃತಿಗಳ, ಲೇಖನಗಳ ಪಟ್ಟಿಯನ್ನು ನೀಡಬಹುದಿತ್ತು. ಅವರು ಬರೆದ 'ಹಿಂದು–ಹಿಂದುತ್ವ –ಹಿಂದುರಾಷ್ಟ್ರ' ಪುಸ್ತಕವು ಲಭ್ಯವಿಲ್ಲ. ಅದರ ಪುನರ್ಮುದ್ರಣವನ್ನು ಮಾಡಬಹುದು.

**ಇನ್ನೊಂದು ಲೋಪ :** ಬಾಬುರಾಯರ ಲೇಖನದಲ್ಲಿ ಶ್ರೀಸದಾನಂದಜಿಯವರ ಜನ್ಮದಿನದ ವರ್ಷ 1921 ಎಂದಿದೆ. (ಪುಟ 89). ಮುಂದೆ ಅವರು 91ನೆ ಹುಟ್ಟುಹಬ್ಬವನ್ನು 2009 ಜೂನ್ 14ರಂದು ಆಚರಿಸಿದರು. (ಪುಟ100) ಎಂದಿದೆ. ಈ ಎರಡು ವರ್ಷಾಂಕಗಳಲ್ಲಿ ಯಾವುದು ಸರಿ?

**91 ಎಂಬುದರ ಬದಲು 89ನೇ ಹುಟ್ಟುಹಬ್ಬ ಎಂದು ತಿದ್ದಿಕೊಳ್ಳಬೇಕು – ಸಂಪಾದಕ**

## 'ಸದಾನಂದ' ಲೋಕಾರ್ಪಣೆ ಸಮಾರಂಭ

**ಕಲ್ಬುರ್ಗಿ :** ವಿಶ್ವ ಹಿಂದು ಪರಿಷದ್‌ನ ಆಶ್ರಯದಲ್ಲಿ ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಸೇವಾ ಸಮಿತಿ, ಸಂಗಮೇಶ್ವರ ದತ್ತ ಮಂದಿರ ಆವರಣದಲ್ಲಿ ದಿವಂಗತ ಸದಾನಂದ ಕಾಕಡೆಯವರ ಸ್ಮೃತಿ ಸಂಚಿಕೆಯ ಬಿಡುಗಡೆಯು 30.10.2011ರಂದು ಬೆಳಿಗ್ಗೆ ನಡೆಯಿತು. ಸಮಾರಂಭದಲ್ಲಿ ಶ್ರೀ ಶಿವವೀರಬಂಡಿ ಅವರು ಪ್ರಾರ್ಥನೆ ಮಾಡಿದರು. ಶ್ರೀ ಬಸವರಾಜಪ್ಪ ಅಪ್ಪ ಶ್ರೀ ಶರಣಬಸವೇಶ್ವರ ಸಂಸ್ಥಾನ, ಅವರು ಅಧ್ಯಕ್ಷತೆವಹಿಸಿದ್ದರು. ಶ್ರೀ ಬಾಬುರಾವ ದೇಸಾಯಿ ಅವರು ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಬಸವರಾಜ ಪಾಟೀಲ ಸೇಡಂ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಶ್ರೀ ಸುರೇಶಹೆರೂರ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು. ಶ್ರೀ ಮಧುಕರ ನಾಯಕ ವಕೀಲರು ಕಾರ್ಯಕ್ರಮದ ಬಗ್ಗೆ ನಿರೂಪಣೆ ಮಾಡಿದರು. ವಿ.ಹಿಂ.ಪ.ದ. ಜಿಲ್ಲಾ ಅಧ್ಯಕ್ಷರಾದ ಶ್ರೀ ಆರ್. ಆರ್. ದೇಸಾಯಿ ಹಾಗೂ ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ವಾಸುದೇವರಾವ ಕುಳಗೇರಿ ಅವರು ಉಪಸ್ಥಿತರಿದ್ದರು. ಕೊನೆಯಲ್ಲಿ ಶ್ರೀ ಲಕ್ಷ್ಮಣರಾವ ಪೊ. ಪಾಟೀಲ ಅವರು ವಂದನಾರ್ಪಣೆ ಮಾಡಿದರು.

**–ಶಿವಶರಣಪ್ಪಾ ಆಲಗೂಡಕರ್**

## ಸದ್ಭಾವನ ಸತ್ಸಂಗ

**ಬೆಂಗಳೂರು :** ಉತ್ತರಹಳ್ಳಿ ನಗರದ ಚಿಕ್ಕಲ್ಲಸಂದ್ರ ಶ್ರೀ ಸಿದ್ಧಿಗಣಪತಿ ದೇವಸ್ಥಾನದಲ್ಲಿ 7.8.2011ರಂದು ಈಗಾಗಲೇ ನಡೆಯುತ್ತಿರುವ ಸತ್ಸಂಗಕ್ಕೆ ನಾಮಕರಣದ ಘೋಷಣೆಯು ನಡೆಯಿತು.

ಶ್ರೀಮತಿ ಲಕ್ಷ್ಮಿಕೌಶಿಕರವರು ಸದ್ಭಾವನ ಎನ್ನುವ ಹೆಸರನ್ನು ಪ್ರಸ್ತಾಪಿಸಿದರು. ಎಲ್ಲರೂ ಒಮ್ಮತದಿಂದ ಅದನ್ನು ಅನುಮೋದನೆ ಮಾಡಿದರು. ಶ್ರೀಮತಿ ನಳಿನಿ ಶ್ರೀದರ್‌ರವರು ಸಿಹಿಯನ್ನು ಹಂಚಿದರು. ಮಹಾನಗರ ಸತ್ಸಂಗ ಪ್ರಮುಖರಾದ ಜಗನ್ನಾಥಶಾಸ್ತ್ರೀಯವರು ಘೋಷಣೆಯನ್ನು ನಡೆಸಿಕೊಟ್ಟರು.

**– ಕೆ. ಅಶ್ವತ್ಥನಾರಾಯಣ**

* **ರಾಜಧಾನಿಯಲ್ಲಿ ಬಾಂಬ್ ಸ್ಫೋಟಗಳು** – ಹೊಸದಿಲ್ಲಿಯ ಅತಿ ಸುರಕ್ಷಿತ ಪ್ರದೇಶ ಉಚ್ಚ ನ್ಯಾಯಾಲಯದ ಆವರಣದಲ್ಲಿಯೇ ಸೆಪ್ಟೆಂಬರ್ ದಿ.7ರ ಮುಂಜಾನೆ 10.14 ಗಂಟೆಗೆ ಆತಂಕವಾದಿಗಳು ಬಲವಾದ ಬಾಂಬ್ ಒಂದನ್ನು ಸ್ಫೋಟಿಸಿದರು – ಪರಿಣಾಮವಾಗಿ ಅಮಾಯಕ 11 ಜನರು ಮೃತಪಟ್ಟು ಕನಿಷ್ಠ 90 ಜನರು ಗಾಯಗೊಂಡಿದ್ದಾರೆ. ಕೇವಲ 2 ತಿಂಗಳ ಹಿಂದೆ ಮೇ ದಿ.25ರಂದು ಅದೇ ನ್ಯಾಯಾಲಯದ ಆವರಣದಲ್ಲೇ ಇದೇ ರೀತಿಯ ಬಾಂಬ್ ಸ್ಫೋಟವಾಗಿತ್ತು. ಮತ್ತು ಆಗ ಆ ನ್ಯಾಯಾಲಯದಲ್ಲಿ ಕ್ಲೋಸ್ ಸರ್ಕಿಟ್ ಟಿ.ವಿಗಳ ವ್ಯವಸ್ಥೆ ಮಾಡಬೇಕೆಂದು ಆದೇಶಿಸಲಾಗಿದ್ದರೂ ಯಾವ ಕ್ರಮವನ್ನೂ ಕೇಂದ್ರ ಸರಕಾರವು ಕೈಕೊಂಡಿಲ್ಲ. ಎಂದರೆ, ಕೇಂದ್ರೀಯ ಗೃಹ ಇಲಾಖೆಯವರು ಈ ವಿಷಯವನ್ನು ಗಂಭೀರವಾಗಿ ಗಮನಿಸುವುದಿಲ್ಲೆಂದು ಸ್ಪಷ್ಟವಾಯಿತು. ರಾಷ್ಟ್ರದ ಸುರಕ್ಷಿತತೆಯ ಮಹತ್ವದ ವಿಷಯದಲ್ಲೂ ಕೇಂದ್ರ ಸರಕಾರದ ಈ ರೀತಿಯ ಉದಾಸೀನತೆ ಮತ್ತು ಅಲಕ್ಷ್ಯತನವು ತುಂಬ ಶೋಚನೀಯವೂ, ಖಂಡನೀಯವೂ ಆಗಿದೆ.

**– ಟೈಮ್ಸ್ ಆಫ್ ಇಂಡಿಯಾ, ಬೆಂಗಳೂರು**

# ಅಲ್ಲಲ್ಲಿಂದ

**– ಭ್ರಮರಾರವಿಂದ**

* ಭಾರತದ ಸರ್ವೋಚ್ಚ ನ್ಯಾಯಾಲಯವು ಆತಂಕವಾದಿ ಅಫಜಲ್ ಗುರುವಿನ ಮರಣದಂಡನೆಯ ಶಿಕ್ಷೆಯನ್ನು ದೃಢಪಡಿಸಿದ ನಂತರವೂ ಆತನನ್ನು ಗಲ್ಲಿಗೆ ಏರಿಸುವದಿಲ್ಲವಾದರೆ ಆತಂಕವಾದಿಗಳು ಹಿಂಜರಿಯದೇ ನಿರ್ಭಯವಾಗಿ ತಮ್ಮ ಆತಂಕವಾದಿ ಚಟುವಟಿಕೆಗಳನ್ನು ಇನ್ನಷ್ಟು ರಭಸದಿಂದ ಮುಂದುವರೆಸಿದರೆ ಯಾವ ಆಶ್ಚರ್ಯವೂ ಇಲ್ಲ.

***ಚೀನಾದೇಶದಿಂದ ಆಕ್ರಮಣ ಅರುಣಾಚಲ ಪ್ರದೇಶದಲ್ಲಿ** – ಭಾರತ – ಚೀನಾ ಗಡಿ ಪ್ರದೇಶದ ಅರುಣಾಚಲ ಪ್ರದೇಶದ ತವಾಂಗ್ ನಗರದ ಸಮೀಪದಲ್ಲಿ ಭಾರತವು ಕಟ್ಟಿದ್ದ 200 ಮೀಟರ್ ಉದ್ದದ ಗೋಡೆಯನ್ನು ಚೀನಾದ ಸೈನಿಕರು ಇದೇ ಜುಲೈ ತಿಂಗಳಲ್ಲಿ ಜಖಂಗೊಳಿಸಿದರು. ಆದರೆ ಭಾರತೀಯ ಸೈನಿಕರು ಆ ಗೋಡೆಯನ್ನು ಪುನಃ ಕಟ್ಟಿದ್ದಾರೆ ಮತ್ತು ಚೀನಾದ ಸ್ಥಳೀಯ ಸೈನಿಕ ಅಧಿಕಾರಿಗಳಲ್ಲಿ ಈ ಸಂದರ್ಭದಲ್ಲಿ ಖಡಕ್ ನಿಷೇಧವನ್ನು ಲಿಖಿತವಾಗಿ ವ್ಯಕ್ತಪಡಿಸಿದ್ದಾರೆ. ಗಡಿ ಪ್ರದೇಶದಲ್ಲಿಯ ತಮ್ಮ ಹಕ್ಕನ್ನು ದೃಢೀಕರಿಸಲು ಎರಡು ದೇಶದ ಸೈನಿಕರು ಬೇಸಿಗೆಯಲ್ಲಿ ಆಗ್ಗಾಗ್ಗೆ ಇಂಥ ಚಟುವಟಿಕೆಗಳನ್ನು ನಡೆಸುತ್ತಿರುತ್ತಾರೆ. ಆದರೆ ಈ ರೀತಿಯ ಸೀಮಾಪ್ರದೇಶದಲ್ಲಿನ ಉಲ್ಲಂಘನೆಯು ತಿರಾ ಖಂಡನೀಯವಾಗಿದೆ. ಈ ತರಹದ ಘಟನೆಗಳನ್ನು ತಡೆಯಲು ಪರ್ವತೀಯ ಧಾಳಿ ಪಥಕವೊಂದನ್ನು (ಮೌಂಟನ್ ಸ್ಟ್ರೈಕ್ ಕೋರ್) ನಿರ್ಮಿಸಬೇಕೆಂಬ ಪ್ರಸ್ತಾಪವನ್ನು ಭಾರತೀಯ ಸೇನಾಧಿಕಾರಿಗಳು ಕೇಂದ್ರೀಯ ರಕ್ಷಣಾ ಮಂತ್ರಾಲಯದಲ್ಲಿ ಈಗಾಗಲೇ ಮಂಡಿಸಿದ್ದಾರೆ.

**– ಟೈಮ್ಸ್ ಆಫ್ ಇಂಡಿಯಾ, ಬೆಂಗಳೂರು**

***ಆತಂಕವಾದಿ ಧಾಳಿಗಾಗಿ ಚೀನಾ ಪಾಕ್‌ನ್ನು ದೂಷಿಸಿತು** – ಪಾಕಿಸ್ತಾನದ ಉತ್ತರ ಗಡಿಗೆ ಸಮೀಪದ ಮತ್ತು ತಮ್ಮ (ಚೀನಾ) ದೇಶದ ನೈಋತ್ಯ ದಿಕ್ಕಿನಲ್ಲಿಯ ಮುಸ್ಲಿಮರೇ ಹೆಚ್ಚಿನ

ಸಂಖ್ಯೆಯಲ್ಲಿರುವ ಸಿಂಕಿಯಾಂಗ್ ಪ್ರಾಂತದಲ್ಲಿ ಇತ್ತೀಚಿಗೆ ಹೆಚ್ಚುತ್ತಿದ್ದ ಆತಂಕವಾದಿ ಗಲಭೆಗಳಿಗಾಗಿ ಚೀನಾದೇಶವು ಪಾಕಿಸ್ತಾನವನ್ನು ದೂಷಿಸಿದೆ. 11 ಚೀನಿಯರನ್ನು ಬಲಿತೆಗೆದುಕೊಂಡಿರುವ ಈ ಆತಂಕವಾದಿಗಳು ಪಾಕಿಸ್ತಾನದಲ್ಲಿಯೇ ತರಬೇತಿ ಪಡೆದಿದ್ದಾರೆಂದು ಚೀನಾದೇಶವು ಖಚಿತವಾದ ಅಭಿಪ್ರಾಯಪಟ್ಟಿದೆ. ಸಿಂಕಿಯಾಂಗದಲ್ಲಿಯ ಮುಸ್ಲಿಮ್ ಉಲ್‌ಘರ್ ಜನಜಾತಿಯು ಹಾಗೂ ಅಲ್ಲಿ ವಲಸೆ ಮಾಡಿರುವ ಚೀನಾದ ಹೂಣ್ ಜಾತಿಯವರಲ್ಲಿ ಆಗ್ಗಾಗ್ಗೆ ಘರ್ಷಣೆಗಳು ನಡೆಯುತ್ತಿರುತ್ತವೆ. ಆದರೆ ಇದೇ ಸಮಯದಲ್ಲಿ ಪಾಕಿಸ್ತಾನದ ಬೇಹುಗಾರ ಸಂಸ್ಥೆಯಾದ ಐ.ಎಸ್.ಐ.ನ ಪ್ರಮುಖ ಅಹ್ಮದ್ ಶುಜಾ ಪಾಶಾ ಸಿಂಕಿಯಾಂಗ್ ಪ್ರಾಂತದ ಪ್ರವಾಸದಲ್ಲಿರುವಾಗಲೇ ತಮ್ಮ ನೆಚ್ಚಿನ ಗೆಳೆಯನಾಗಿರುವ ಪಾಕ್‌ನ್ನು ಈ ರೀತಿ ದೂಷಿಸಿರುವುದು ವಿಶೇಷವೇ!

**– ಟೈಮ್ಸ್ ಆಫ್ ಇಂಡಿಯಾ, ಬೆಂಗಳೂರು**

*ಅಂತೂ, ಇದರಿಂದಾಗಿ ಪಾಕ್ ಆತಂಕವಾದಿಗಳಿಗೆ ಆಸರೆ ಮತ್ತು ತರಬೇತಿ ನೀಡುತ್ತದೆಂಬ ಭಾರತದ ಆಕ್ಷೇಪವು ಸರಿಯಾಗಿದೆಂಬುದು ಸಿದ್ಧವಾಗುತ್ತದೆ. ಎಂದರೆ, ಯಾವಾಗಲೂ ಭಾರತವನ್ನು ಕಾಡುವಾಗ ಪಾಕಿಸ್ತಾನವನ್ನು ಹುರಿದುಂಬಿಸುವ ಚೀನಾದೇಶದಲ್ಲಿಯೇ ಪಾಕ್‌ನ ಆತಂಕವಾದಿ ಚಟುವಟಿಕೆಗಳು ನಡೆಯುತ್ತಿವೆಯೆಂದರೆ 'ಗುರುವಿನ ವಿದ್ಯೆಯಿಂದ ಗುರುವಿಗೇನೆ ತಿರುಗೇಟು' ಎಂಬಂತೆ ಆಯಿತಲ್ಲ!

***ದೇಶವನ್ನು 'ತಾಯಿ' ಎನ್ನಲು ಇಸ್ಲಾಮ್ ವಿರೋಧಿಸುವದಿಲ್ಲ!** – ಕೇವಲ 'ಮೊಹ್ಮದ್ ಪೈಂಗಬರ್‌ನೇ ಪ್ರವಾದಿ' ಎಂಬ ಇಸ್ಲಾಮ್‌ದ ನಂಬಿಕೆ ಹಾಗೂ ಮೂರ್ತಿಪೂಜೆಗೆ ಇರುವ ವಿರೋಧ ಇವುಗಳಿಂದಾಗಿ ಭಾರತದಲ್ಲಿನ ಮುಲ್ಲಾ-ಮೌಲ್ವಿಗಳು 'ವಂದೇ ಮಾತರಂ' ರಾಷ್ಟ್ರಗೀತೆಯನ್ನು ವಿರೋಧಿಸುತ್ತಾರೆ. ಆದರೆ ಪಾಕಿಸ್ತಾನದ 'ಏ ಸರಜಮಾನೇ ಪಾಕ್,ಜರೇ ತರೇ ಹೈ ಸಿತಾರೋಂಸೆ ತಾಬನಾಕ್' ಎಂಬ ಮೊದಲನೇ ರಾಷ್ಟ್ರಗೀತೆಯನ್ನು ಜಗನ್ನಾಥ್ ಪ್ರಸಾದ್ ಎಂಬ ಹಿಂದೂ ಕವಿಯು ಪಾಕಿಸ್ತಾನದ ನಿರ್ಮಾಪಕ ಹಾಗೂ ಗವರ್ನರ್ ಜನರಲ್ ಬ್ಯಾರಿಸ್ಟರ್ ಮೊಹ್ಮದ್ ಅಲಿಜಿನ್ನಾ ಇವರ ಕೋರಿಕೆಯಂತೆ ರಚಿಸಿದ್ದನು!..... ಮಹಾಕವಿ ಡಾ. ರವೀಂದ್ರನಾಥ್ ಠಾಕೂರ್‌ರವರು ಬರೆದ ಗೀತೆಯು ನಂತರ ಬಾಂಗ್ಲಾದೇಶದ ರಾಷ್ಟ್ರಗೀತೆ ಆಯಿತು. ಅದರಲ್ಲಿ, "ತಾಯಿ, ನಿನ್ನ ಧ್ವನಿಯನ್ನು ಕೇಳಿದಾಗ ನನ್ನ ಕಿವಿಯೊಳಗೆ 'ಅಮೃತ-ವರ್ಷಾವ್' ಆದಂತೆ (ಅಮೃತವನ್ನು ಸುರಿದಂತೆ) ಆಗುತ್ತದೆ, ನಿನ್ನ 'ಮ್ಲಾನ್-ವದನ' (ದುಃಖದಿಂದ ನರಳುವ ಮುಖವನ್ನು) ನೋಡಿದಾಗ ಕಣ್ಣೀರು ಬರುತ್ತದೆ" ಎಂದು ಕವಿಯು ಬಣ್ಣಿಸಿದ್ದಾನೆ.... ಇಂಡೋನೇಶಿಯಾದಂಥ ಮುಸ್ಲಿಮ್ ದೇಶದ ರಾಷ್ಟ್ರಗೀತೆಯಲ್ಲಿ ಕೂಡ "ತಾಯಿ, ನಾನು ನಿನ್ನ ಸೈನಿಕನಾಗಿದ್ದೇನೆ" ಎಂದು ಹೇಳಲಾಗಿದೆ. ತಮ್ಮ ದೇಶವನ್ನು 'ತಾಯಿ' ಎಂದು ಕರೆಯುವುದಕ್ಕೆ ಮುಸ್ಲಿಮ್ ದೇಶಗಳೂ ವಿರೋಧಿಸುವದಿಲ್ಲ.

**– 'ಸಕಾಳ್' ಮರಾಠಿ, ದಿನಪತ್ರಿಕೆ**

*ಭಾರತದಲ್ಲಿನ ಮುಸ್ಲಿಮ್ ಬಂಧುಗಳೂ ಇತರ ಮುಸ್ಲಿಮರಂತೆ ನಡೆಯುವರೆ?

***ವಿಶ್ವದ ಅತಿವೃದ್ಧ ಮಹಿಳೆಯ ನಿಧನ :–** ದಕ್ಷಿಣ ಅಮೇರಿಕೆಯ ಬ್ರಾಝಿಲ್ ದೇಶದ ಮಾರಿಯಾ ಗೋಮ್ಸ್ ವ್ಯಾಲೆಂಟಿಮ್ ಎಂಬ ಮಹಿಳೆಯು ಇದೇ ಕಳೆದ ಜೂನ್‌ನಲ್ಲಿ ತಮ್ಮ 114ನೇ ವಯಸ್ಸಿನಲ್ಲಿ

ನಿಧನಳಾದಳು. ಆಕೆ ಕಳೆದ ಜುಲೈ ದಿ. 9 ರಂದು 115ನೇ ವರ್ಷದಲ್ಲಿ ಪದಾರ್ಪಣೆ ಮಾಡುವವಳಿದ್ದಳು. ಗಿನ್ನೀಜ್ ಬುಕ್ ಆಫ್ ವರ್ಲ್ಡ್ ರಿಕಾರ್ಡ್ಸ್ ನಂತೆ ಆಕೆ ವಿಶ್ವದ ಅತಿ ವಯೋವೃದ್ಧ ಮಹಿಳೆಯಾಗಿದ್ದಳು. ಇಂಥ ಸ್ಥಾನವನ್ನು ಪಡೆದ ಆಕೆ ಬ್ರಾಝಿಲ್ ದೇಶದ ಮೊಟ್ಟ ಮೊದಲ ನಾಗರೀಕಳೂ ಹೌದು

**– ಟೈಮ್ಸ್ ಆಫ್ ಇಂಡಿಯಾ, ಬೆಂಗಳೂರು**

***ಅ–ಮಾನವೀಯ ದೇಶಾಂತರದ ಯೋಜನೆ –** ಸಣ್ಣ ಮಕ್ಕಳ ದುಡಿಮೆಯ ವಿಷಯದಲ್ಲಿ ಪ್ರಗತಿ ಶೀಲ ರಾಷ್ಟ್ರಗಳನ್ನು ಆಗಾಗೆ ಕಠೋರವಾಗಿ ಟೀಕಿಸುವ ಮುಂದುವರಿದ ರಾಷ್ಟ್ರಗಳ ಚರಿತ್ರೆಯಲ್ಲಿನ 'ಕಪ್ಪು' ಭಾಗವು ಇತ್ತೀಚಿಗೆ ಬೆಳಕಿಗೆ ಬಂದಿದೆ. ..........1800 ನೇ ಈಸ್ವಿಯಿಂದ 1960ನೇ ಈಸ್ವಿಯವರೆಗಿನ 160 ವರ್ಷಗಳ ಸುದೀರ್ಘ ಅವಧಿಯಲ್ಲಿ ಇಂಗ್ಲೆಂಡ್ ದೇಶವು 3 ರಿಂದ 14 ವರ್ಷ ವಯಸ್ಸಿನ ಬೀದಿಪಾಲು ಆಗಿರುವ ಸುಮಾರು 1.5 ಲಕ್ಷ ಸಣ್ಣ ಮಕ್ಕಳನ್ನು ಆಗಿನ ಬ್ರಿಟಿಷ್ ಸಾಮ್ರಾಜ್ಯದಲ್ಲಿದ್ದ ಆಸ್ಟ್ರೇಲಿಯಾ, ಕೆನೆಡಾ, ಆಫ್ರಿಕಾದಲ್ಲಿನ ರ್‍ಹೋಡೇಶಿಯ, ಮುಂತಾದ ದೇಶಗಳಿಗೆ ಕಳುಹಿಸಿ ಅಲ್ಲಲ್ಲಿಯ ಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ, ಸಿರಿವಂತರ ಬಂಗ್ಲೆಗಳಲ್ಲಿ ದಿನಗೂಲಿ ಕೆಲಸಗಳಲ್ಲಿ ತೊಡಗಿಸಿತು. ಅವರಲ್ಲಿಯ ಅನೇಕರು ಲೈಂಗಿಕ ಶೋಷಣೆಗೂ ಗುರಿಯಾಗುತ್ತಿದ್ದರು ಎಂದು ಬ್ರಿಟಿಷ್ ಪಾರ್ಲಮೆಂಟಿನ ವರದಿಯಲ್ಲೇ ನಮೂದಿಸಲಾಗಿದೆ... ನಾಚಿಗೇಡಿನ ಸಂಗತಿಯೆಂದರೆ ಈ ಅಮಾನವೀಯ ದೇಶಾಂತರದ ಯೋಜನೆಯನ್ನು 'ಚಿಲ್ಡ್ರೇನ್ಸ್ ಏಡ್ ಸೋಸೆಟಿ' ಸಿದ್ಧಪಡಿಸಿತ್ತು. ಮತ್ತು ಇದರ ಮೂಲ ಉದ್ದಿಶ್ಯವು ಬೀದಿಪಾಲಾಗಿದ್ದ ಮಕ್ಕಳ ಪೋಷಣೆಯ ಖರ್ಚಿನ ಭಾರವು ಸರಕಾರಿ ಖಜಾನೆಯ ಮೇಲೆ ಬೀಳಿಸದೇ ಪರಭಾರೆಯಾಗಿ ಆಗಿನ ಬ್ರಿಟಿಷ್ ಕಾಲೋನಿಯಲ್ಲಿನ ದೇಶಗಳು ವಹಿಸುವಂತೆ ಆಗಬೇಕು ಹಾಗೂ ಆದೇಶಗಳ ಹಣದಿಂದಲೇ ಆ ದೇಶಗಳಲ್ಲಿ 'ಬಿಳಿಯರ' ಸಂಖ್ಯೆಯನ್ನು ಹೆಚ್ಚಿಸುವುದು ಆಗಿತ್ತು!... ಕೆನೆಡಾ ದೇಶದ ಇಂದಿನ ಜನಸಂಖ್ಯೆಯಲ್ಲಿನ 11%ರಷ್ಟು ಜನರು ಅಂದಿನ ಆ ಬಾಲ ಕೆಲಸಗಾರರ ವಾರಸದಾರರು ಆಗಿದ್ದಾರೆಂದು ಕೆನೆಡಾದ ಜನಸಂಖ್ಯೆ ವರದಿಯಲ್ಲಿಯೇ ತಿಳಿಸಲಾಗಿದೆ.

**– 'ಲೋಕಾಸತ್ತಾ' ಮರಾಠಿ ದಿನಪತ್ರಿಕೆ, ಮುಂಬಯಿ**

## "ಭಗತ್‌ಸಿಂಗ್‌ರ 104ನೇ ಜನ್ಮದಿನಾಚರಣೆ"

### ಗುಲ್ಬರ್ಗಾ –28 : ಪ್ರತಿವರ್ಷದಂತೆ ಭಾರತದ ಶ್ರೇಷ್ಠ ಸ್ವಾತಂತ್ರ್ಯ

ಹೋರಾಟಗಾರ, ಸರ್‌ದಾರ್ ಭಗತ್‌ಸಿಂಗ್ ಅವರ 104ನೇ ಜನ್ಮದಿನಾಚರಣೆಯು, ಶಹಾಬಜಾರದ ಶಿವಶರಣಪ್ಪ ಆಲಗೂಡಕರ ಅವರ ಸ್ವ–ಗೃಹದಲ್ಲಿ ಭಗತ್‌ಸಿಂಗ್ ಅವರ ಭಾವಚಿತ್ರಕ್ಕೆ ಹೂಮಾಲೆಯನ್ನು ಹಾಕಿ, ಜ್ಯೋತಿ ಬೆಳಗುವ ಮೂಲಕ ಆಚರಿಸಲಾಯಿತು. ಈ ಸಮಾರಂಭಕ್ಕೆ ಅಭಿಮಾನಿಗಳು ಮತ್ತು ವಿಶ್ವಹಿಂದು ಪರಿಷದ್‌ನ ಕಾರ್ಯಕರ್ತರು ಭಾಗವಹಿಸಿದ್ದರು. ದೇಶಕ್ಕೆ ಅವರು ಮಾಡಿದ ಬಲಿದಾನ, ತ್ಯಾಗ, ಆದರ್ಶಗಳನ್ನು ಈ ಸಂದರ್ಭದಲ್ಲಿ ನೆನೆಪಿಸಿಕೊಳ್ಳಲಾಯಿತು.

**– ಎಸ್.ಬಿ. ಆಲಗೂಡಕರ್**

# ಹೊಲಿಗೆಯಿಂದ ಹೊಸ ಜೀವನ : ಮಾದರಿ ಕಾರ್ಯಾಗಾರ ಸಾರ್ಥಕ ಸೇವೆ

ಅದು ಬಹ್ವಂಶ ಆರ್ಥಿಕವಾಗಿ ಕೆಳಮಧ್ಯಮ ಹಾಗೂ ಕೆಳವರ್ಗಗಳ ಬೆಂಗಳೂರಿನ ವಸತಿ ಪ್ರದೇಶ. ಕಳೆದ ಐದು ವರ್ಷಗಳಿಂದ ಆ ಪ್ರದೇಶದಲ್ಲಿ ಮೌನವಾಗಿ ಒಂದು ಕಾಯಕ ತಪಸ್ಸು ನಡೆಯುತ್ತಿದೆ. ಪ್ರದರ್ಶನ, ಜಾಹೀರಾತು, ಭರಾಟೆಗಳ ನಡುವೆ ತಮ್ಮ ಆತ್ಮತೃಪ್ತಿಗಾಗಿ ದೇಶಾದ್ಯಂತ ನಡೆಸುತ್ತಿರುವ ಲಕ್ಷಾವಧಿ ಅಜ್ಞಾತ ಕಾರ್ಯಕರ್ತರ ಸೇವಾಕಾರ್ಯಗಳ ಸಾಲಿಗೆ ಇದೂ ಸೇರುತ್ತದೆ.

ಇಲ್ಲಿನ ಬಾಲಕ ಬಾಲಕಿಯರು ಅಪರೂಪ ಅನುಭವವಾಗಬಹುದಾದ ಶುದ್ಧವಾದ ಕನ್ನಡವನ್ನು ಮಾತನಾಡಬಲ್ಲರು. ಕರ್ನಾಟಕದ ಹಲವು ವೀರರ, ಸಂತರ ಜೀವನ ಕಥೆಗಳು ಅವರಿಗೆ ಗೊತ್ತಿದೆ. ಅಷ್ಟೇಕೆ ಭಗವದ್ಗೀತೆಯ ಕೆಲವು ಅಧ್ಯಾಯಗಳು ಅವರಿಗೆ ಬಾಯಿ ಪಾಠವಾಗಿದೆ. ಪ್ರಾಥಮಿಕ ಆರೋಗ್ಯ, ಶುಚಿತ್ವದ ಅರಿವು ಉಂಟುಮಾಡುವ ಸತತ ಪ್ರಯತ್ನಕ್ಕೆ ಈಚೆಗೆ ಯಶಸ್ಸು ದೊರಕುತ್ತಿದೆ. ಈ ಬಡಾವಣೆಯ ಯುವತಿಯರು ವಾರದಲ್ಲಿ ಎರಡು ಮೂರು ದಿನಗಳಲ್ಲಿ ಗಂಟೆಯ ಕಾಲ ಸಣ್ಣ ಸಣ್ಣ ಗುಂಪುಗಳಲ್ಲಿ ಸೇರುತ್ತಾರೆ. ಸಾಂಪ್ರದಾಯಿಕ ಜೀವನ ರೀತಿಯ ಶಿಷ್ಟತೆಯನ್ನು ಕಾಪಾಡುವುದರೊಂದಿಗೆ, ಯೋಗ, ಧ್ಯಾನ, ವ್ಯಕ್ತಿತ್ವ ವಿಕಸನದಂತಹ ಈಗಿನ ಶಿಕ್ಷಣ ಪರಿಸರವನ್ನು ಬೆಳೆಸುವ, ಪರಿಚಯಿಸುವ, ಸತತ ಪರಿಶ್ರಮಕ್ಕೆ ಮನ್ನಣೆ ದೊರಕುತ್ತಿದೆ.





ಈಚೆಗೆ ಈ ವಸತಿ ಕ್ಷೇತ್ರದಲ್ಲಿ ಮಹಿಳೆಯರಿಗಾಗಿ ನಡೆದ 2 ತಿಂಗಳ ಹೊಲಿಗೆ ತರಬೇತಿಯ ಕಾರ್ಯಾಗಾರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಇಲ್ಲಿನ ಈ ಅರಿವಿನ ಕನಸು ಬೆನ್ನಟ್ಟಿ; ನನಸು ಮಾಡುವ ಛಲದ ಸ್ಥೂಲ ಪರಿಚಯವಾಯಿತು.

ಬಡತನದ ರೇಖೆಯ ಕೆಳಗಿನ 27 ಜನ ಯುವತಿಯರಿಗಾಗಿ ಸೆಪ್ಟೆಂಬರ್ 2ರಿಂದ ನಡೆದ ಶಿಬಿರ ಅದು. ಅದರಲ್ಲೂ ವಿಶೇಷ ಪ್ರಯತ್ನದಿಂದ ಶಿಬಿರದ ನಿಜ ಉದ್ದೇಶವನ್ನು ಸಾಧಿಸಲು, ಉಪೇಕ್ಷಿತ ಮಹಿಳೆಯರು, ಜೀವನಾನುಕೂಲವಿಲ್ಲದ ಮಹಿಳೆಯರೂ, ವಿಧವೆಯರೂ, ಶಿಕ್ಷಿತರಾಗಿ, ಸ್ವಾವಲಂಬಿಗಳಾಗಬೇಕೆಂದು ಕೊಂಡಿರುವುದೂ ಈ ಶಿಬಿರದಿಂದಾಗಿ ಸಾಧಿತವಾಗಿದೆಯೆಂದು ಈ ಸಂಘಟಿತ ಮಹಿಳೆಯರ ತಂಡ ಹೆಮ್ಮೆಯಿಂದ ಹೇಳುತ್ತಿದೆ.



ಒಬ್ಬೊಬ್ಬರಿಗೂ ಕನಿಷ್ಠ 130 ಘಂಟೆಗಳ ಶಿಕ್ಷಣ ಮತ್ತು ತರಬೇತಿ ಸಿಗಬೇಕೆಂದೂ ಆಗ ಮಾತ್ರವೇ ತಾವು ಶಿಬಿರದಲ್ಲಿ ನೀಡಿದ, ಬರೆದುಕೊಟ್ಟ, ಟಿಪ್ಪಣಿಗಳ ಸಹಾಯದಿಂದ ಮುಂದಿನ ಬೆಳವಣಿಗೆಯನ್ನು ಅವರು ಸ್ವಂತವಾಗಿ ಪಡೆಯಬಹುದೆಂಬ ಸೂತ್ರವನ್ನು ಸಂಘಟಕರು ನಿರ್ಧರಿಸಿದರು. ದಿನವೂ 3 ತಂಡಗಳಲ್ಲಿ ಬರುತ್ತಿದ್ದ ಈ ಶಿಕ್ಷಾರ್ಥಿಗಳು ದಿನವೂ ತಪ್ಪದೆ ಬರುತ್ತಿದ್ದರೆಂದರೆ ಅವರ ಅಭಿರುಚಿಯನ್ನು ಮೆಚ್ಚಲೇಬೇಕು. ಈ ಶಿಬಿರಕ್ಕಾಗಿಯೇ 14 ಹೊಲಿಗೆ ಯಂತ್ರಗಳನ್ನು ಒಟ್ಟು ಸೇರಿಸಿದುದರಿಂದ; ಕೆಲವು ವಿದ್ಯಾರ್ಥಿಗಳು ತಮ್ಮ ಪಾಳಿಯ ಸಮಯದ ನಂತರವೂ ಸ್ವಲ್ಪ ಕಾಲ ಹೊಲಿಗೆ ಯಂತ್ರವನ್ನು ಉಪಯೋಗಿಸುವ ಸೌಲಭ್ಯ ಪಡೆದುಕೊಂಡರು.



ಯಂತ್ರದ ಪೆಡಲ್ ತುಳಿಯಲು ಬಾರದವರು; ಶಿಬಿರದ ಕೊನೆಗೆ ರವಿಕೆಯ ಅಳತೆ ಪಡೆದು ಕತ್ತರಿಸಿ; ಹೊಲಿಯುವಷ್ಟರ ಪ್ರಾವಿಣ್ಯ ಪಡೆದ ಬಗ್ಗೆ ಹೆಮ್ಮೆಯನ್ನು ಅವರೇ ಸಮಾರೋಪ ಕಾರ್ಯಕ್ರಮದಲ್ಲಿ ವ್ಯಕ್ತ ಪಡಿಸಿದುದು ಒಟ್ಟು ಶಿಬಿರದ ಸಫಲತೆಯನ್ನು ಸೂಚಿಸುತ್ತದೆ.

ನೇರ ಹೊಲಿಗೆಯ ಅಭ್ಯಾಸವಾಗಲು ಹಳೆಯ ಬಟ್ಟೆ, ಎರಡನೆ ಹಂತವಾಗಿ ಕರವಸ್ತ್ರದ ನಾಲ್ಕು ಅಂಚುಗಳ ಹೊಲಿಗೆ, ಆನಂತರ ಮಕ್ಕಳ ಒಳ ಉಡುಪಿನ ಹೊಲಿಗೆ, ಕಡೆಗೆ ಮಕ್ಕಳ ಒಳ ಲಂಗದ ತಯಾರಿ, ಹೀಗೆ ಮುಂದುವರಿಯುವ ಪಠ್ಯಕ್ರಮವು ಚೂಡಿದಾರ, ಮತ್ತು ರವಿಕೆಗಳನ್ನು ಸಿದ್ಧಪಡಿಸುವ ಸ್ವಯಂ ಪೂರ್ಣತೆಯನ್ನು ಹೊಂದಿಸಿಕೊಡುತ್ತದೆ. ಇಷ್ಟೆಕ್ಕೆಲ್ಲ ಬೇಕಾದ ಬಟ್ಟೆ, ದಾರ, ಸೂಜಿ, ನಡುನಡುವೆ ಯಂತ್ರಗಳ ರಿಪೇರಿ, ಬಂದ ಶಿಕ್ಷಾರ್ಥಿಗಳಿಗೆ ಚಹಾ ಮತ್ತು ಬಿಸ್ಕೆಟ್ ಇಷ್ಟೆಲ್ಲವನ್ನು ಸ್ವಯಂ ಸ್ಫೂರ್ತಿಯಿಂದ ಈ ತಂಡವು ಒದಗಿಸಲು ಹೊರಟಿತು.

ಆ ನಡುವೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ಇಲಾಖೆಯು ಇಂತಹ ಮಹಿಳಾ ಕಲ್ಯಾಣ ಕಾರ್ಯಕ್ರಮಗಳಿಗೆ ಸಹಯೋಗ ನೀಡುವ ವಿಚಾರ ತಿಳಿದು ಬಂದಂತೆ ಇಂತಹ ಶಿಬಿರದ ಆರ್ಥಿಕ ಹೊರೆಯನ್ನಾದರೂ ಕಡಿತಗೊಳಿಸಬಹುದೆಂಬ ಸದಾಶಯವೂ ಸಂಘಟಕ ಮಹಿಳೆಯರಿಗೆ ಅನಿಸಿತು. ಅದರಂತೆ ನಿಗಮದ ಅಧ್ಯಕ್ಷೆಯರಾದ ಶ್ರೀಮತಿ ಸರೋಜಿನಿ ಭಾರದ್ವಾಜರನ್ನು ಭೇಟಿಯಾದಾಗ ತಮ್ಮ ಎಂದಿನ ವಿನಯ, ಸಾಮಾಜಿಕ ಪ್ರಜ್ಞೆ, ಕಳಕಳಿಯ ನಿಲುವುಗಳನ್ನು ವ್ಯಕ್ತಪಡಿಸಿ ತಮ್ಮ ಅಧಿಕಾರಿಗಳಿಗೆ ಸೂಕ್ತ ಸಲಹೆ, ಸಹಕಾರಗಳನ್ನು ನೀಡುವಂತೆಯೂ ನಿರ್ದೇಶಿಸಿದರು. ಉತ್ಸಾಹಿತರಾದ ಸಂಘಟಕರು ತಮಗೆ ಸದಾ ಬೆಂಬಲಕ್ಕೆ ನಿಲ್ಲುತ್ತಿದ್ದ ಭಾರತ ಸಂಸ್ಕೃತಿ ಪ್ರತಿಷ್ಠಾನದ ಹಿರಿಯರನ್ನು ಕಂಡರು. ಅಲ್ಲಿಂದಲೂ ಸಕಾಲಿಕ ನೆರವಿನ ಭರವಸೆಯಿಂದ ಶಿಬಿರವೂ ಪ್ರಾರಂಭವಾಯಿತು. ಶಿಬಿರದ ಉದ್ಘಾಟನೆಗೆ ಶ್ರೀಮತಿ ಸರೋಜಿನಿ ಭಾರದ್ವಾಜರೂ, ಬಂದು ಮೆಚ್ಚಿ ಮಾತನಾಡಿದರು.

ಶಿಬಿರದ ಸಫಲತೆಯ ಸಂತೋಷ, ಆರ್ಥಿಕ ಹೊರೆಯನ್ನು ಇಳಿಸಿಕೊಳ್ಳಲು ಮಾಡಬೇಕಾದ ಪ್ರಯತ್ನದ ಕಷ್ಟಸಾಧ್ಯತೆಯಲ್ಲೂ ಸಮಾಜ ಸೇವಕರು ಕಂಡುಕೊಳ್ಳಬೇಕಾದ ಸಂತೃಪ್ತಿಯೊಂದಿಗೆ ಮಾತನಾಡಿದ ಶಿಬಿರದ ರೂವಾರಿ ಶ್ರೀಮತಿ ನೇತ್ರಾವತಿಯವರು ಮುಂದೆಯೂ ಅತಿ ಅಗತ್ಯವಾಗಿರುವ ಈ ತರಬೇತಿಯನ್ನು ಬೇರೆ ಬೇರೆ ರೂಪದಲ್ಲಾದರೂ ಮುಂದುವರಿಸುವೆ ಎಂದರು. ಅಂದ ಹಾಗೆ ಈ ಶಿಬಿರ ನಡೆದುದು ಬೆಂಗಳೂರಿನ ಸಂಪಂಗಿರಾಮನಗರದಲ್ಲಿ. ಇದರ ರೂವಾರಿ ಶ್ರೀಮತಿ ನೇತ್ರಾವತಿಯವರೊಂದಿಗೆ ಇದ್ದ ತಂಡದ ಸದಸ್ಯರು ಪವಿತ್ರಾ, ಹೇಮಾ, ಸರಳವೇಣಿ, ಶಾಂತಾ, ಲಕ್ಷ್ಮಿ, ಉಷಾ ಮೊದಲಾದವರು.

**ಕೃಪೆ : ಶಿಲ್ಪಾ ಸಿ.** ಸ್ತ್ರೀಸಿರಿ ಪತ್ರಿಕೆ

## ಬೆಂಗಳೂರು ಮಹಾನಗರದಲ್ಲಿ ನವರಾತ್ರಿಯ ವಿವಿಧ ಕಾರ್ಯಕ್ರಮಗಳು

1. ಕನಕಪುರದ ಶ್ರೀ ಶಂಕರಮಠದಲ್ಲಿ ಆಶ್ವಯುಜ ಶುದ್ಧ ಪ್ರತಿಪತ್ ಮತ್ತು ಬಿದಿಗೆಯಂದು (ದಿ. 29.09.2011 ಮತ್ತು 30.09.2011 ದೇವಿ ಮಹಾತ್ಮೆಯ ಬಗ್ಗೆ ಪ್ರವಚನ ನಡೆಯಿತು.,
2. ದಿ. 1.10.2011 ರಂದು ಬೆಂಗಳೂರಿನ ಅರಕೆರೆ ಮೈಕೊ ಲೇಔಟಿನಲ್ಲಿ ಶ್ರೀಮತಿ ಗೌರಮ್ಮ ಅವರ ಮನೆಯಲ್ಲಿ ಸುಂದರಕಾಂಡ ಪ್ರವಚನ.
3. ಕಗ್ಗದಾಸಪುರದ ಡಿ. ಆರ್.ಡಿ.ಓ. ಕಾಂಪ್ಲೆಕ್ಸಿನಲ್ಲಿ 3.10.2011ನೇ ಸೋಮವಾರ, ಶ್ರೀ ಭಕ್ತವತ್ಸಲ ಅವರ ನೇತೃತ್ವದಲ್ಲಿ ಸುಂದರಕಾಂಡ ಪ್ರವಚನ.
4. 5.10.2011 ರಂದು ಅರಕೆರೆ ಮೈಕೊ ಲೇಔಟಿನಲ್ಲಿ ದೇವಿ ಮಹಾತ್ಮೆಯ ಬಗ್ಗೆ ಶ್ರೀಮತಿ ಶಾಂತಲಾಪ್ರಸನ್ನ ಅವರ ಮನೆಯಲ್ಲಿ ಪ್ರವಚನ.

ಇವೆಲ್ಲ ಪ್ರವಚನ ಕಾರ್ಯಕ್ರಮಗಳನ್ನು ಮಹಾನಗರ ಮಠಮಂದಿರಗಳ ಪ್ರಮುಖರಾದ ಹೆಚ್.ಎಸ್. ಸುಬ್ಬರಾವ್‌ರವರು ನಡೆಸಿಕೊಟ್ಟರು.

## ಮತೀಯ ಮತ್ತು ನಿರ್ದೇಶಿತ ಹಿಂಸಾಚಾರ ತಡೆ ಮಸೂದೆ 2011ರ ವಿರೋಧ

**ಭದ್ರಾವತಿ :** 23.09.11ರಂದು ಧರ್ಮಶ್ರೀ ಸಭಾ ಭವನದಲ್ಲಿ ಕೇಂದ್ರ ಸರಕಾರವು ಶಾಸನವಾಗಿಸ ಹೊರಟ ಮತೀಯ ಮತ್ತು ನಿರ್ದೇಶಿತ ಹಿಂಸಾಚಾರ ತಡೆ ಮಸೂದೆ 2011ರ ವಿರುದ್ಧ ಜಾಗೃತಿ ಸಭೆಯು ನಡೆಯಿತು. ಭದ್ರಾವತಿ ಪರಿಷದ್ ಅಧ್ಯಕ್ಷ ವಿ.ಬಿ. ನಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯು ನಿಖಿಲ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ವೈ.ಎಸ್.ರಾಮಮೂರ್ತಿಯವರು ಸ್ವಾಗತಿಸಿದರು. ನೂರಕ್ಕೂ ಹೆಚ್ಚು ಸಭಿಕರಿದ್ದ ಈ ಕಾರ್ಯಕ್ರಮದಲ್ಲಿ ಶಿವಮೊಗ್ಗದ ವಕೀಲ ಎಸ್.ಎನ್. ರಾಜೇಶಶಾಸ್ತ್ರೀಯವರು ಮುಖ್ಯ ಭಾಷಣವನ್ನು ಮಾಡಿದರು. ಮುಖ್ಯ ಅತಿಥಿಗಳಾಗಿ ಪರಿಷದ್ ಪ್ರಾಂತ ಉಪಾಧ್ಯಕ್ಷರಾದ ಹಾ. ರಾಮಪ್ಪನವರು ಜಿಲ್ಲಾ ಅಧ್ಯಕ್ಷ ರಮೇಶಬಾಬುರವರು ಆಗಮಿಸಿದ್ದರು. ಪ್ರಾಸ್ತಾವಿಕವಾಗಿ ಹೆಚ್.ಎಲ್. ವಿಶ್ವನಾಥರವರು ಮಾತನಾಡಿದರು. ಶಂಕರರಾವ್ ರವರು ನಿರೂಪಿಸಿದ ಈ ಸಭೆಯಲ್ಲಿ ಶಿವಕುಮಾರ ಓಂಕಾರಪ್ಪ ವೀರ ಭದ್ರಪ್ಪ ಜಿಲ್ಲಾ ಕಾರ್ಯದರ್ಶಿಗಳಾದ ನಟರಾಜರವರು ಉಪಸ್ಥಿತರಿದ್ದರು. ವರದರಾಜರವರ ವಂದನೆಗಳೊಂದಿಗೆ ಸಭೆ ಸಂಪನ್ನಗೊಂಡಿತು.

**ಭಾವಚಿತ್ರ ರಕ್ಷಾಪುಟ 2**

ವಿಶ್ವಹಿಂದು ವಾರ್ತಾ

## ಗೋಹತ್ಯೆ ವಿರುದ್ಧ ಪ್ರದರ್ಶನ

**ಸಿದ್ಧಾಪುರ (ಕೊಡಗು) :** ಕಾನೂನು ಬಾಹಿರವಾಗಿ ಗೋವುಗಳನ್ನು ಹತ್ಯೆ ಮಾಡಿದುದಲ್ಲದೆ ಸಾರ್ವಜನಿಕ ಉಪಯೋಗದ ನೀರಿನ ಆಶ್ರಯಗಳನ್ನು ಅಪವಿತ್ರಗೊಳಿಸುವ ದುಷ್ಕರ್ಮಿಗಳನ್ನು ಬಂಧಿಸಿ ಕ್ರಮಕೈಗೊಳ್ಳುವಂತೆ ವಿಶ್ವಹಿಂದು ಪರಿಷದ್ ಕಾರ್ಯಕರ್ತರು ಆಗ್ರಹಿಸಿದರು.

ನವೆಂಬರ್ 8ರಂದು ಸಿದ್ಧಾಪುರ ಸೇತುವೆಯ ಬಳಿ ಕಾವೇರಿ ನದಿಗೆ, ಹತ್ಯೆಗೈದ ಗೋವಿನ ದೇಹದ ಭಾಗಗಳನ್ನು ಎಸೆದಿರುವುದನ್ನು ಕಂಡ ಸಾರ್ವಜನಿಕರೂ, ಕಾರ್ಯಕರ್ತರೂ ಠಾಣೆಗೆ ದೂರ ನೀಡಿದರು. ಠಾಣೆಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿದುದಲ್ಲದೆ ದೂರನ್ನೂ ದಾಖಲಿಸಿದರು. ಅಪರಾಧಿಗಳನ್ನು ಬಂಧಿಸಲು ಕ್ರಮಕೈಗೊಳ್ಳುವಂತೆಯೂ ಪ್ರತಿಭಟನೆಯನ್ನು ತೀವ್ರ ಗೊಳಿಸುವಂತೆಯೂ ಸಾರ್ವಜನಿಕರು ನಿಶ್ಚಯಿಸಿರುವರು.

## ಅಭ್ಯಾಸವರ್ಗ

**ದೇವನಹಳ್ಳಿ :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಪ್ರಖಂಡದ ಕಾರ್ಯಕರ್ತರ ಪರಿಚಯ ವರ್ಗವು ನಡೆಯಿತು. 70 ಮಂದಿ ಕಾರ್ಯಕರ್ತರ ಈ ವರ್ಗದಲ್ಲಿ ಗುಡ್ಡದ ಆದಿಶಕ್ತಿ ಮಹಾಕ್ಷೇತ್ರದ ಶ್ರೀ ನರಸಿಂಹಮೂರ್ತಿ ಸ್ವಾಮೀಜಿಯವರು ಸಾನ್ನಿಧ್ಯವಹಿಸಿದ್ದು; ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಮೋರ್ಚಾದ ಅಧ್ಯಕ್ಷರಾದ ಶ್ರೀಚಿನ್ನಪ್ಪನವರು ಅಧ್ಯಕ್ಷರಾಗಿ ಬಂದಿದ್ದರು. ವರ್ಗದ ಪ್ರಾಸ್ತಾವಿಕ ಅವಧಿಯನ್ನು ರಾಜ್ಯ ಬಜರಂಗದಳ ಸಂಚಾಲಕ ಸೂರ್ಯನಾರಾಯಣ ನಿರ್ವಹಿಸಿದರು. ಬೆಂಗಳೂರು ಮಹಾನಗರ ಹಲಸೂರು ಜಿಲ್ಲಾ ಸಹಕಾರ್ಯದರ್ಶಿ ಭಾಗ್ಯರವರು ಮಾತೃಮಂಡಳಿಯ

ಕಾರ್ಯಕ್ರಮಗಳ ಮಾಹಿತಿಯನ್ನು ನೀಡಿದರು. ಖ್ಯಾತ ಪಶುವೈದ್ಯ ಡಾ॥ ದೊಡ್ಡೇಗೌಡರು ಸಮಾರೋಪ ಕಾರ್ಯಕ್ರಮದ ಅಧ್ಯಕ್ಷರಾಗಿಯೂ ರಾಜ್ಯ ಸತ್ಸಂಗ ಹಾಗೂ ಭಾರತ ಸಂಸ್ಕೃತಿಪ್ರತಿಷ್ಠಾನದ ಸಂಚಾಲಕರೂ ಆಗಿರುವ ಶ್ರೀಬಸವರಾಜರವರು ಸಮಾರೋಪ ಸಂದೇಶವನ್ನು ನೀಡಿದರು. **ಭಾವಚಿತ್ರ ರಕ್ಷಾಪುಟ 2**

**– ವರದಿ ಆರ್ ದೊಡ್ಡೇಗೌಡ ಜಿಲ್ಲಾ ಸಂಘಟನಾ ಕಾರ್ಯದರ್ಶಿ**

## ಸ್ಥಾಪನಾ ದಿನಾಚರಣೆ

**ಬೆಂಗಳೂರು** : 27.09.11 ರಂದು ಜಾಲಹಳ್ಳಿಯ ಶ್ರೀ ಭವಾನಿ ವಿದ್ಯಾ ಮಂದಿರ ಶಾಲೆಯಲ್ಲಿ ಗೋಕುಲಾಷ್ಟಮಿ ಹಬ್ಬವು ರಾಘವೇಂದ್ರ ಸ್ವಾಮಿ ದೇವಸ್ಥಾನ (ಮಠ) ದಲ್ಲಿ ಆಚರಿಸಲ್ಪಟ್ಟಿತು. ಕಾರ್‍ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಶಾರದೇಶಾನಂದಜಿಯವರು ವಹಿಸಿದ್ದರು. (ರಾಮಕೃಷ್ಣ ವಿವೇಕಾನಂದಾಶ್ರಮ – ಹರಿಹರ) ಕಾರ್‍ಯಕ್ರಮದ ಅಂಗವಾಗಿ ದೇವಸ್ಥಾನದ ವತಿಯಿಂದ ಮಕ್ಕಳಿಗೂ ಪೋಷಕರೆಲ್ಲರಿಗೂ ಪ್ರಸಾದ ವ್ಯವಸ್ಥೆಯು ಏರ್ಪಡಾಗಿದ್ದಿತು. **– ಎಂ.ಬಿ. ಪಾಣಿಪಾತ್**

**ಭಾವಚಿತ ರಕ್ಷಾಪುಟ 4**

## ಸನ್ಮಾನ

**ಚೆನ್ನರಾಯಪಟ್ಟಣ :** ತಾಲ್ಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಚನ್ನರಾಯ ಪಟ್ಟಣ ವತಿಯಿಂದ ಈ ವರ್ಷದ ಸ್ವಾತಂತ್ರ್ಯೋತ್ಸವದ ದಿನದಂದು ಶ್ರೀ ಡಿ. ಗೋಪಾಲರಾವ್ ಅವರನ್ನು ಅಭಿನಂದನಾ ಪತ್ರವನ್ನು ನೀಡಿ ಪುರಸ್ಕರಿಸಿ ಸನ್ಮಾನಿಸಲಾಯಿತು. ನಿವೃತ್ತ ಶಿಕ್ಷಕರಾಗಿರುವ ಶ್ರೀ ಗೋಪಾಲರಾವ್‌ರವರು ತಮ್ಮ ಬಿ.ಎಸ್ಸಿ, ಬಿ.ಇಡಿ. ಪದವಿಗಳನ್ನು ಪೂರೈಸಿ 31 ವರ್ಷಗಳ ಸೇವೆಯಲ್ಲಿ ಮುಖ್ಯ ಶಿಕ್ಷಕರಾಗಿಯೂ ಕರ್ತವ್ಯವನ್ನು ನಿರ್ವಹಿಸಿದರು. ಅವರು ತಮ್ಮ ವೃತ್ತಿಯೊಂದಿಗೆ ಪ್ರವೃತ್ತಿಯಾಗಿಯೂ ಸ್ವೀಕರಿಸಿದ ದುರ್ಬಲರಿಗೆ ಆಸರೆಯನ್ನು ನೀಡಿ ಶಿಕ್ಷಣ ನೀಡುವುದೇ ಮೊದಲಾದ ಸಮಾಜಸೇವೆಯನ್ನು ಲಕ್ಷಿಸಿ ಈ ಸನ್ಮಾನ ಮಾಡಲಾಗಿದೆ. ಭಾರತ ಸಂಸ್ಕೃತಿ ಪ್ರತಿಷ್ಠಾನದ ಪರೀಕ್ಷಾ ಸಂಯೋಜಕರಾಗಿಯೂ ಉತ್ತಮ ಮಾದರಿಯ ಸಾಂಸ್ಕೃತಿಕ ಸೇವೆಯನ್ನು ನಡೆಸುತ್ತಿರುವ ಶ್ರೀ ಡಿ. ಗೋಪಾಲರಾವ್ ಬೆಕ್ಕಿ ಅವರಿಗೆ ನಮ್ಮೆಲ್ಲರ ಅಭಿನಂದನೆಗಳು **ಭಾವಚಿತ್ರ ರಕ್ಷಾಪುಟ 3**

## ಶ್ರದ್ಧಾಂಜಲಿ



**ಭದ್ರಾವತಿ :** ವಿಶ್ವಹಿಂದು ಪರಿಷದ್‌ನ ಶಿವಮೊಗ್ಗ ಜಿಲ್ಲಾ ಉಪಾಧ್ಯಕ್ಷರಾಗಿದ್ದ ಶ್ರೀ ಕೆ. ಹಾಲಪ್ಪ. ನಿವೃತ್ತ ಕೆ.ಇ.ಬಿ. ಇಂಜಿನೀಯರ್‌ರವರು ದಿನಾಂಕ 9.9.2011 ರಂದು ತಮ್ಮ ಸ್ವಗೃಹದಲ್ಲಿ ದೈವಾಧೀನಾದರು. ಮೃತರು ತಮ್ಮ ಮಕ್ಕಳು ಹಾಗೂ ತಮ್ಮ ಪತ್ನಿ ಹಾಗೂ ಬಂಧುಗಳನ್ನು ಆಗಲಿದ್ದಾರೆ ಮೃತರಿಗೆ 88 ವರ್ಷವಾಗಿದ್ದು ಪರಿಷದನಲ್ಲಿ ತಾಲ್ಲೂಕು, ಜಿಲ್ಲಾ ಜವಾಬ್ದಾರಿಹೊಂದಿ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಮಾಡಿ 30 ವರ್ಷಕ್ಕೂ ಹೆಚ್ಚು ಸಮಯ ಸೇವೆಯನ್ನು ಸಲ್ಲಿಸಿದ್ದಾರೆ.

13.09.2011ರಂದು ಸಂಜೆ ಧರ್ಮಶ್ರೀ ಸಭಾಭವನದಲ್ಲಿ

ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಮಾಡಲಾಯಿತು. ವಿ.ಹಿಂ.ಪ. ಉಪಾಧ್ಯಕ್ಷ ಹಾ. ರಾಮಪ್ಪ, ಶ್ರೀ ಜಿ. ಓಂಕಾರಪ್ಪ ಶ್ರೀ ಶಿವಯೋಗಿಮದನ್‌ರವರು ಅವರನ್ನು ಕುರಿತು ಮಾತಾಡಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಡಿ.ಆರ್. ಶಿವಕುಮಾರ ವಹಿಸಿದ್ದರು. ಸ್ವಾಗತವನ್ನು ಶ್ರೀ ಜೆ. ಜಯರಾಮ್ ಪ್ರಾರ್ಥನೆ. ಶ್ರೀ ಎಲ್. ಚಂದ್ರಪ್ಪ ಹಾಗೂ ವಂದನೆಯನ್ನು ಶ್ರೀ ಹೆಚ್.ಪಿ. ಶಂಕರರಾವ್ ಮಾಡಿದರು ಕಡೆಯಲ್ಲಿ ಒಂದು ನಿಮಿಷ ಮೌನದ ನಂತರ ಮೃತರಿಗೆ ಸಂತಾಸವನ್ನು ಸೂಚಿಸಿದರು. ಹಾಗೂ ಕುಟುಂಬದವರಿಗೆ ಅವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿ ಕೊಡಲೆಂದು ಪ್ರಾರ್ಥಿಸಿದರು.

## ಜಿಲ್ಲಾ ಅಭ್ಯಾಸವರ್ಗ

**ಧಾರವಾಡ** 16.10.2011 ಧಾರವಾಡ ಜಿಲ್ಲಾ ವಿಶ್ವಹಿಂದು ಪರಿಷತ್ ಘಟಕವು ಮಾಳಮಡ್ಡಿಯ ವನವಾಸಿ ಶ್ರೀ ರಾಮಮಂದಿರದಲ್ಲಿ ಒಂದು ದಿನದ ಜಿಲ್ಲಾ ಅಭ್ಯಾಸವರ್ಗವನ್ನು ಆಯೋಜಿಸಿತ್ತು. ಅಭ್ಯಾಸವರ್ಗವನ್ನು ಮುಖ್ಯ ಅತಿಥಿ ಧಾರವಾಡದ ಲೆಕ್ಕ ಪರಿಶೋಧಕ ಮಧುಸೂದನ ಪಿಸೆ ಅವರು ದೀಪ ಬೆಳಗಿಸಿ ಉದ್ಘಾಟಿಸಿದರು. ಓಂಕಾರ, ಐಕ್ಯಮಂತ್ರ, ರಾಮನಾಮ ಮಂತ್ರ ಹಾಗೂ ಶ್ರೀ ಹನೂಮಾನ್ ಚಾಲೀಸಾವನ್ನು ಕಾರ್ಯಕರ್ತರು ಪಠಿಸಿದ ನಂತರ ಶ್ರೀಮತಿ ವನಿತಾ ರಾಮಕೃಷ್ಣ ಭಟ್ಟ ಅವರ ಸ್ವಾಗತ ಗೀತೆಯೊಂದಿಗೆ ಅಭ್ಯಾಸವರ್ಗವು ಪ್ರಾರಂಭವಾಯಿತು.

ಅಭ್ಯಾಸವರ್ಗದಲ್ಲಿ ವಿಶ್ವ ಹಿಂದು ಪರಿಷತ್, ಬಜರಂಗದಳ, ಮಾತೃಮಂಡಳಿ, ಧರ್ಮಾಚಾರ್ಯ ಸಂಪರ್ಕ ವಿಭಾಗ, ಧರ್ಮ ಪ್ರಸಾರ ವಿಭಾಗ ಹಾಗೂ ಹಿಂದು ಹೆಲ್ಪ ಲೈನ್‌ಗಳ ಕುರಿತಾಗಿ ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಪರಿಷತ್ತಿನ ಪ್ರಾಂತ ಸಂಘಟನಾ ಕಾರ್ಯದರ್ಶಿ ಕೇಶವ ಹೆಗಡೆ, ಪ್ರಾಂತ ಕಾರ್ಯದರ್ಶಿ ರಮೇಶ ಕುಲಕರ್ಣಿ, ಪ್ರಾಂತ ಧರ್ಮಾಚಾರ್ಯ ಸಂಪರ್ಕ ಪ್ರಮುಖ ಶ್ರೀಧರ ದೀಕ್ಷಿತ, ಪ್ರಾಂತ ಉಪಾಧ್ಯಕ್ಷರಾದ ಉಷಾ ದೀಕ್ಷಿತ, ಪ್ರಾಂತ ಧರ್ಮ ಪ್ರಸಾರ ವಿಭಾಗದ ಪ್ರಮುಖ ನಾರಾಯಣ ಬಸವಾ ಹಾಗೂ ಬಜರಂಗದಳದ ಅನಿಲ ಮುತ್ನಾಳೆ ಗೋಷ್ಠಿಗಳನ್ನು ನಡೆಸಿಕೊಟ್ಟರು.ಸಮಾರೋಪ ಕಾರ್ಯಕ್ರಮದಲ್ಲಿ ಪ್ರಾಂತ ಕಾರ್ಯಾಧ್ಯಕ್ಷ ಡಾ॥ ಜಿ.ಎಚ್. ನರೇಗಲ್ ಉಪಸ್ಥಿತರಿದ್ದರು.

ವರ್ಗದ ಕಾರ್ಯಕ್ರಮಗಳನ್ನು ಜಿಲ್ಲಾ ಕಾರ್ಯದರ್ಶಿ ಕುಶೇಂದ್ರ ಪ್ರಭು ನಿರ್ವಹಿಸಿದರು. ಜಿಲ್ಲಾ ಅಧ್ಯಕ್ಷ ಮೋಹನ ಕಾನಗೋ, ಜಿಲ್ಲಾ ಸಹಕಾರ್ಯದರ್ಶಿ ಕೃಷ್ಣಾ ಕುಮಟೇಕರ ಹಾಗೂ ಇನ್ನಿತರ ಪದಾಧಿಕಾರಿಗಳಾದ ರಾಘವೇಂದ್ರ ಕುಲಕರ್ಣಿ, ಎ.ಸಿ. ಕುಲಕರ್ಣಿ, ಕಲ್ಲಪ್ಪ ಅಂಗಡಿ, ರಾಜು ಮುರಗೋಡ ಮೊದಲಾದವರು ಪಾಲ್ಗೊಂಡಿದ್ದರು.

**ಭಾವಚಿತ್ರ ರಕ್ಷಾಪುಟ 2**

**ಕೃಷ್ಣಾ ಕುಮಟೇಕರ್,** ಜಿಲ್ಲಾ ಸಹ ಕಾರ್ಯದರ್ಶಿ

## ಕಾರ್ತಿಕ ದೀಪೋತ್ಸವ

**ಕಬ್ಬನ ಪೇಟೆ** ಪ್ರಖಂಡ (ಬೆಂಗಳೂರು ಮಹಾನಗರ)ದ ವಾರ್ಷಿಕೋತ್ಸವವಾದ ಕಾರ್ತಿಕದೀಪೋತ್ಸವವು ಕಾರ್ತಿಕ ಶುದ್ಧನವಮಿ 4.11.11ರಂದು ನಡೆಯಿತು. ಚಿಕ್ಕ ಅಣ್ಣಮ್ಮ ದೇವಸ್ಥಾನದಿಂದ ಗಂಗಮ್ಮ ದೇವಾಲಯದವರೆಗೆ ಬೆಳಗಿದ ದೀಪಗಳ ಸೌಂದರ್ಯ ಅಲೌಕಿಕವಾಗಿದ್ದಿತು.

**ಭಾವಚಿತ್ರ ರಕ್ಷಾಪುಟ 3**



ಮೊದಲ ಜ್ಯೋತಿಯನ್ನು ಬೆಳಗಿಸುವ ಮೂಲಕ ದೀಪೋತ್ಸವಕ್ಕೆ ನಾಂದಿ ಮಾಡಿದ ಡಾ॥ ಶ್ರೀ ಸಂತೋಷ ಗುರೂಜಿಯವರು ಭಾಗವಹಿಸಿದ ಎಲ್ಲಾ ಧಾರ್ಮಿಕ ಜನರ ಮನಮುಟ್ಟುವ ಉದಾಹರಣೆಗಳ ಮೂಲಕ ಆಶೀರ್ವಚನವನ್ನು ನೀಡಿದರು. ಪ್ರಾಚೀನ ಸಿಂಧೂ ಸಂಸ್ಕೃತಿಯಿಂದ ಬೆಳೆದ ಹಿಂದು ಸಂಸ್ಕೃತಿಯ ಚರಿತ್ರೆಯನ್ನು ವಿವರಿಸುತ್ತ ಹೆಣ್ಣು ಮಕ್ಕಳ ಸಾಂಸ್ಕೃತಿಕ ಮಹತ್ವದ ದಿನಚರಿಯನ್ನು ಅಲಂಕಾರಗಳ ಮಹತ್ವವನ್ನು ತಿಳಿಸಿದರು. ಮನದ ಕತ್ತಲೆಯನ್ನು ಕಳೆಯುವ ದೀಪದ ಅವಶ್ಯಕತೆಯ ಕಥೆಗಳ ಮೂಲಕ ಮನಗಾಣಿಸಿದರು.

ಕೈಗಾರಿಕೋದ್ಯಮಿಗಳಾದ ಶ್ರೀ ಶಿವರಾಮ್ ರವರು ಮುಖ್ಯ ಅತಿಥಿಗಳಾಗಿದ್ದು ಪ್ರಾಂತ ಸಹಕಾರ್ಯದರ್ಶಿಗಳಾದ ಬಿ.ಈ. ಸುರೇಶ ರವರೂ ಆಗಮಿಸಿದ್ದರು. ಬಿಡದೆ ಪ್ರತ್ಯಕ್ಷ ವಾಗುತ್ತಿದ್ದ ವರುಣದೇವನ ತುಂಬು ಆಶೀರ್ವಾದವೂ ಉತ್ಸವದ ಮೇಲೆ ಇದ್ದಂತಿತ್ತು.



**– ಲತಾ ವೇಣುಗೋಪಾಲ್**





**ಹಿಂದುವಾಣಿ – ಜಾಹೀರಾತು ದರ**

| | |
|---|---|
| ಆರ್ಟ್‌ಪೇಪರ್ ಬಹುವರ್ಣದಲ್ಲಿ<br>2 ಅಥವಾ 3ನೇ ರಕ್ಷಾ ಪುಟ | 10000=00 |
| ಮ್ಯಾಪ್‌ಲಿಥೋ ಕಪ್ಪುಬಿಳುಪು<br>ಒಂದು ಪುಟ | 3000=00 |

# ನೀವೆಷ್ಟು ಬುದ್ಧಿವಂತರು

1. ಕಾರ್ಗಿಲ್ ಯುದ್ಧ ಸಮಯದಲ್ಲಿ ಭಾರತವನ್ನು ಮುನ್ನಡೆಸಿದ ಪ್ರಧಾನಮಂತ್ರಿ ಯಾರು?
2. ಭಾರತದ ಅತ್ಯಂತ ಎತ್ತರದ ಜಲಪಾತ ಯಾವುದು?
3. ಕನ್ನಡದ ಮೊಟ್ಟಮೊದಲ ಕವಯಿತ್ರಿ ಯಾರು?
4. ರಾಷ್ಟ್ರೀಯ ಎಂಜಿನಿಯರ್‌ಗಳ ದಿನವನ್ನು ಯಾರ ನೆನಪಿನಲ್ಲಿ ಆಚರಿಸಲಾಗುತ್ತದೆ?
5. ‘ಭಾರತದ ಸಿಲಿಕಾನ್ ವ್ಯಾಲಿ’ ಎಂದು ಕರೆಸಿಕೊಳ್ಳುವ ನಗರ ಯಾವುದು?
6. ದೇವತೆಗಳ ತಾಯಿ ಯಾರು?
7. ‘ಗದುಗಿನ ಭಾರತ’ ಎಂದು ಕರೆಯಲ್ಪಡುವ ‘ಕರ್ನಾಟ ಭಾರತ ಕಥಾಮಂಜರಿ’ ಯನ್ನು ರಚಿಸಿದವರು ಯಾರು?
8. ತಂದೆಯ ಸುಖ ಸಂತೋಷಕ್ಕಾಗಿ ಭೀಷ್ಮ ಪ್ರತಿಜ್ಞೆಗೈದ ಮಹಾಪುರುಷ ಯಾರು?
9. ಇತ್ತೀಚೆಗೆ ಯಾವ ಮಹಾಸಾಮ್ರಾಟನ ಪಟ್ಟಾಭಿಷೇಕ ಮಹೋತ್ಸವದ 500ನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು?
10. ಯೋಗ ವಿದ್ಯೆಗೆ ಸಂಬಂಧಿಸಿದ ‘ಯೋಗಸೂತ್ರ’ ಗ್ರಂಥದ ಕರ್ತೃ ಯಾರು?

(ಉತ್ತರ ಪುಟ 39)

## ಶಬ್ದ ಶೋಧ – 64ರ ಉತ್ತರ

| | | | | | | | | | | |
|---|---|---|---|---|---|---|---|---|---|---|
| | | | | 1 ಶ | ರ | 2 ತ್ | | | | |
| | | 3 ಗೀ | ಣೀ | ರ್ವಾ | ■ | 4 ರಿ | ಕಾ | 5 ಪು | | |
| | | ಜ | ■ | ಣಿ | ■ | ಹ | ■ | ರು | | |
| 6 ಮ | ತಂ | ಗ | ■ | ■ | ■ | ■ | ■ | 7 ತಿ | ಮ | 8 ಶ್ರೀ |
| ಹಾ | ■ | ■ | ■ | ■ | ■ | ■ | ■ | ■ | ■ | ಕ |
| ಕಾ | ■ | ■ | ■ | ■ | ■ | ■ | ■ | ■ | ■ | ಲ್ಯಾ |
| 9 ಆ | ದ | 10 ಕ | ■ | ■ | ■ | ■ | ■ | 11 ಡಾ | ವ | ಣಿ |
| | | ದಂ | ■ | 12 ಲ | ■ | 13 ಒ | ■ | ಕಿ | | |
| | | 14 ಬ | ಕು | ಲಾ | ■ | 15 ನ | ಆ | ನಿ | | |
| | | | | 16 ತಿ | ರ | ಪು | | | | |

# ತಂದೆ

– ಮಹಾದೇವಯ್ಯ ಕರದಳ್ಳಿ, ಕಲ್ಬುರ್ಗಿ



ತಾಯಿಯ ನಂತರದ ಸ್ಥಾನ ತಂದೆಯದ್ದು. ತಾಯಿ ಪ್ರೀತಿ ಕೊಟ್ಟರೆ ತಂದೆ ಬದುಕಿಗೆ ರಕ್ಷಣೆ ನೀಡುತ್ತಾನೆ. ಆದ್ದರಿಂದ ಉಪನಿಷತ್ತುಗಳು ತಂದೆಯನ್ನು ಪಿತೃದೇವೋಭವ ಎಂದಿವೆ.

ತಂದೆ ಕುಟುಂಬ ಮುಖ್ಯಸ್ಥನಾಗಿ, ಯಜಮಾನನಾಗಿ ಎಲ್ಲರ ಯೋಗಕ್ಷೇಮ ಗಮನಿಸುತ್ತಾನೆ. ಹಿರಿಯರಿಗೆ ಗೌರವ ನೀಡಿ ಮೇಲ್ಪಂಕ್ತಿ ಹಾಕುತ್ತಾನೆ. ಕಾಲ ಕಾಲಕ್ಕೆ ಬೇಕಾಗುವ ಅವರ ಅವಶ್ಯಕತೆಗಳನ್ನು ವಿಶೇಷ ಕಾಳಜಿವಹಿಸಿ ಪೂರೈಸುತ್ತಾನೆ. ಕಿರಿಯರ ಬೇಕು ಬೇಡಗಳನ್ನು ಪರಿಶೀಲಿಸಿ ಅವರ ಬೆಳವಣಿಗೆಗೆ ಬೇಕಾದ ಸಂಗತಿಗಳನ್ನು ಒದಗಿಸುತ್ತಾನೆ. ಜೊತೆಗೆ ಪರಿವಾರದಲ್ಲಿನ ಅಶಕ್ತರ, ಯೋಗಕ್ಷೇಮದ ವ್ಯವಸ್ಥೆ ನಿರ್ವಹಿಸುತ್ತಾನೆ. ಕುಟುಂಬದ ಆದಾಯಕ್ಕೆ ತಕ್ಕಂತೆ ಪರಿವಾರದ ಎಲ್ಲ ಸದಸ್ಯರಿಗೂ ಸಮಾಧಾನವಾಗುವಂತೆ ಅವರವರ ಇಚ್ಛೆಗಳನ್ನು ಪೂರೈಸುತ್ತಾನೆ. ಒಟ್ಟಾರೆ ಅಭಿಪ್ರಾಯ ಪಡೆದು ಬಹುಜನ ಸುಖಾಯ ಎಂಬ ನಿರ್ಣಯ ನೀಡುವುದರಿಂದ ಸಂಸಾರದಲ್ಲಿ ಸಮಾಧಾನ ಸಾಮರಸ್ಯ ಒಡಮೂಡುತ್ತದೆ. ಆದ್ದರಿಂದ ತಂದೆಯ ಬಗ್ಗೆ ಎಲ್ಲರಿಗೂ ವಿಶೇಷ ಗೌರವ. ಹಿಂದಿನ ಅವಿಭಕ್ತ ಕುಟುಂಬಗಳ ಮಹತ್ವ ಈ ಯಜಮಾನನಿಂದ ಅರಿವಿಗೆ ಬರುತ್ತದೆ.

ಬದುಕಿನ ಪ್ರತಿಹಂತದಲ್ಲೂ ಕೈ ಆಸರೆ ನೀಡಿ ಪ್ರೀತಿಸುತ್ತ ಗದರಿಸುತ್ತ ವ್ಯಕ್ತಿತ್ವ ಅರಳಿಸುವವನೇ ತಂದೆ. ಮನುಷ್ಯ ತೀರಿಸಬೇಕಾದ ಎರಡನೇ ಬಹು ಮಹತ್ವದ ಋಣ ಪಿತೃ ಋಣ. ಸೂರ್ಯನ ವಿಕಿರಣಗಳಿಂದ ಓಝೋನ ಪರದೆ ರಕ್ಷಿಸುವಂತೆ ಬದುಕಿನ ಅವಘಡಗಳಿಂದ ಮಕ್ಕಳನ್ನು ತಂದೆ ಸಂರಕ್ಷಿಸುತ್ತಾನೆ. ವಿದ್ಯೆ ಬುದ್ಧಿ ನೀಡಿ ಉತ್ತಮ ನಾಗರೀಕನಾಗುವಂತೆ ಬೆಳೆಸುವಲ್ಲಿ ತಂದೆಯ ಪಾತ್ರ ಮಹತ್ವದ್ದು. ಮಕ್ಕಳಲ್ಲಿನ ಗುಣಗಳನ್ನು ಗುರುತಿಸಿ ಅವುಗಳ ವಿಕಾಸಕ್ಕಾಗಿ ಸೂಕ್ತ ವಿದ್ಯೆ ಮತ್ತು ತರಬೇತಿ ತಂದೆಯಿಂದ ಮಕ್ಕಳಿಗೆ ದೊರೆಯುತ್ತದೆ. ಮಕ್ಕಳಿಗೆ ತಮ್ಮ ಕಣ್ಮುಂದೆ ಇರುವ ತಂದೆಯನ್ನು ನೋಡಿ ಮುಂದೆ ಬೆಳೆದು ದೊಡ್ಡವರಾಗಿ ತಮ್ಮ ತಂದೆಯಂತಾಗಬೇಕು ಎಂಬ ಭಾವನೆ ಸಹಜವಾಗಿ ಮೂಡುತ್ತದೆ. ಕುಂಬಾರ ಮಣ್ಣು ಹದ ಮಾಡಿ ಸುಂದರ ಮಡಿಕೆ ಮಾಡುವಂತೆ ತಂದೆ ಮುಗ್ಧ ಮಕ್ಕಳ ಬಾಳು ಹದ ಮಾಡುತ್ತ ಬೆಳೆಸಿ ಗುಣವಂತರಾಗಿ, ಉದ್ಯೋಗಮಾಡುವಂತಹರಾಗಿ, ಸ್ವಾಭಿಮಾನವಂತರಾಗಿ ಬೆಳೆವಂತಹ ವಾತಾವರಣ ರೂಪಿಸುತ್ತಾನೆ. ಆದ್ದರಿಂದಲೇ ತಂದೆ ಇಲ್ಲದ ಮಗು ಅನಾಥವಾಗಿ ಕಾಡಿನ ಮರದಂತೆ ಅಡ್ಡಾದಿಡ್ಡಿ ವ್ಯಕ್ತಿಯಾಗಿ ಬೆಳೆದು ಹಲವು ಸಲ ಸಮಾಜ ಕಂಟಕನಾಗಬಹುದು. ತಾಯಿ ಪ್ರೀತಿ ತಂದೆ ರಕ್ಷಣೆ ಮಗುವಿನ ಆರೈಕೆಗೆ ಅತಿ ಅವಶ್ಯ.

ದಶರಥ ಪುತ್ರ, ಪಾಂಡು ಪುತ್ರರು ಎಂದು ತಂದೆಯ ಹೆಸರಿನಿಂದ ಮಕ್ಕಳನ್ನು ಗುರುತಿಸಲಾಗುತ್ತದೆ. ಎಂಬುದು ನೋಡಿದಾಗ ತಂದೆಯ ಮಹತ್ವ ಮಕ್ಕಳ ಜೀವನ ರೂಪಿಸುವಲ್ಲಿ ಅಗಾಧವಾದದ್ದು ಎಂಬುದು ಸಹಜವಾಗಿ ತಿಳಿದು ಬರುತ್ತದೆ.

ಭಾರತದಲ್ಲಿ ಪರಿವಾರಗಳ ಉದಯದಿಂದ ಇಂದಿನವರೆಗೆ ಸಹಸ್ರಮಾನಗಳ ಕಾಲದಿಂದ ತಂದೆಯ ಸ್ಥಾನ ಅಭಾಧಿತವಾಗಿ ಮುಂದುವರೆದಿದೆ. ತಂದೆ ಪಂಡಿತನಿರಲಿ, ಪಾಮರನಿರಲಿ, ಶ್ರೀಮಂತನಿರಲಿ, ಬಡವನಿರಲಿ, ವಿದ್ಯಾವಂತನಿರಲಿ ಅವಿದ್ಯಾವಂತನಿರಲಿ ತನ್ನ ಪಾರಿವಾರಿಕ ಯಜಮಾನಿಕೆಯ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿದ್ದಾನೆ. ಕೋಟಿಗಟ್ಟಲೆ ಪರಿವಾರಗಳು ತಮ್ಮ ಯಜಮಾನನೆಂದಿನಿಸಿಕೊಳ್ಳುವನ ಛಾಯೆಯಲ್ಲಿ ರಕ್ಷಣೆ ಪಡೆದುಕೊಂಡು ಬದುಕುತ್ತಿವೆ.

ಬಡತನದಲ್ಲಿದ್ದ ತಂದೆ ಸತ್ತರೆ ಮಕ್ಕಳು ದುಃಖಿಸುತ್ತಾರೆ. ಶ್ರೀಮಂತ ತಂದೆ ಸತ್ತರೆ ಮೇಲೆ ಅಳುತ್ತಾ ಮಕ್ಕಳು ಒಳಗೊಳಗೆ ಸಂತೋಷ ಪಡುತ್ತಾರೆ. ತಂದೆಯ ಒಡೆತನದ ಸಂಪತ್ತಿಗೆಲ್ಲ ಒಡೆಯರಾಗಿ ಮೆರೆಯಬಹುದು ಎಂಬ ಬಯಕೆ ಕೈಗೂಡಿದ ಸಂತೋಷ ಅವರದ್ದಾಗಿರುತ್ತದೆ ಎಂದು ಶ್ರೀ ತರುಣ ಮುನಿಸಾಗರ ಹೇಳುತ್ತಾರೆ. ಆದ್ದರಿಂದ ತಂದೆ ಆಸ್ತಿಗಳಿಸುವ ಬದಲಾಗಿ ಕುಟುಂಬಕ್ಕೆ, ದೇಶಕ್ಕೆ ಆಸ್ತಿಯಾಗುವ ಮಕ್ಕಳನ್ನು ಬೆಳೆಸಬೇಕು.

ತಂದೆಯಿರದ ಮನೆಯ ಮೇಲೆ ಊರವರ ಕಣ್ಣು ಎಂಬ ಮಾತಿದೆ. ಸಕಲ ರೀತಿಯ ರಕ್ಷಣೆ ನೀಡುವ, ತಮ್ಮ ಹೊಟ್ಟೆ ಬಟ್ಟೆ ಕಟ್ಟಿ ಮಕ್ಕಳನ್ನು ಬೆಳೆಸುವ ತಂದೆ, ಬಾಲ್ಯ ಹಾಗೂ ಯೌವನದಲ್ಲಿ ಕೇಳಿದ್ದನ್ನು ಕೊಟ್ಟ ತಂದೆ ತಾಯಿಗಳನ್ನು ಯೌವನ ಬಂದಾಗ ಕಡೆಗಣಿಸುವ ರೀತಿ ಆರಂಭವಾಗಿದೆ. ಮತ್ತು ವೃದ್ಧಾಪ್ಯದಲ್ಲಿರುವ ತಂದೆ ತಾಯಿಗಳ ಯೋಗಕ್ಷೇಮ ಅಲಕ್ಷಿಸುವ ಕೃತಘ್ನ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಭಾರತೀಯ ಪರಂಪರೆಯಲ್ಲಿ ತಂದೆಯ ಮಹತ್ವ ಅರಿತು ಆಚರಿಸಬೇಕು. ತಂದೆತಾಯಿಗಳು ಸಂಸಾರವೆಂಬ ರಥದ ಎರಡು ಗಾಲಿಗಳು. ಸಂಸಾರದಿಂದ ಸುಮಧುರ ಸರಿಗಮ ಸಂಗೀತ ಬರಬೇಕಾದರೆ ಯುವಪೀಳಿಗೆ ತಂದೆಗೆ ಗೌರವ, ತಾಯಿ ಪ್ರೀತಿಗೆ ಜೇನು ಬೆರೆಸುವ ಕೆಲಸ ಮಾಡಬೇಕು.

ಬಾಲ್ಯದ ನಮ್ಮ ದಿನಗಳನ್ನು ಒಂದು ಸಲ ಮೆಲುಕು ಹಾಕಬೇಕು. ಅವರು ಕೊಟ್ಟ ವಿದ್ಯೆ, ಬುದ್ಧಿಗಳಿಂದ ಬೆಳೆದ ಹಣ ಅಧಿಕಾರ ಗಳಿಸುವ ನಾವುಗಳು ಅವರನ್ನೇ ಧಿಕ್ಕರಿಸಿ ಬದುಕುವಂತಾಗಬಾರದು. ಬಾಲ್ಯದಲ್ಲಿ ಮಕ್ಕಳ ರಕ್ಷಣೆ ಜವಾಬ್ದಾರಿ ತಂದೆತಾಯಿಗಳದ್ದಾದರೆ, ವೃದ್ಧಾಪ್ಯದಲ್ಲಿ ಅವರ ರಕ್ಷಣೆ ಮಕ್ಕಳದ್ದು ಎಂಬ ಸಾಮಾಜಿಕ ಮೌಲ್ಯದ ಪ್ರತಿಷ್ಠಾಪನೆಗೆ ಮಹತ್ವ ಬರುವಂತೆ ಬದುಕಬೇಕು. ಅವರಿಗೆ ಇಷ್ಟ ಬಂದ ಬದುಕುವ ಸ್ವಾತಂತ್ರ್ಯ ಮತ್ತು ಸಾಧನಗಳನ್ನು ಮಕ್ಕಳು ನೀಡಬೇಕು. ಆಗ ನಮ್ಮ ಬದುಕು ಹಸನಾಗುತ್ತದೆ ಪಿತೃಋಣಭಾರ ಕಡಿಮೆ ಆಗುತ್ತದೆ. ಸಾರ್ಥಕ ಬದುಕಿನ ಆನಂದ ಸಿಗುತ್ತದೆ. ಭವಿಷ್ಯದಲ್ಲಿ ನಮ್ಮ ಮಕ್ಕಳ ಬದುಕಿಗೆ ಒಂದು ದಾರಿದೀಪ ಕೊಟ್ಟಂತಾಗುತ್ತದೆ.

## ನೀವೆಷ್ಟು ಬುದ್ಧಿವಂತರು (ಪುಟ-32): ಉತ್ತರಗಳು

1. ಅಟಲ್ ಬಿಹಾರಿ ವಾಜಪೇಯಿ
2. ಗೇರುಸೊಪ್ಪೆ (ಜೋಗ್) ಜಲಪಾತ
3. ಅಕ್ಕಮಹಾದೇವಿ
4. ಸರ್. ಎಂ.ವಿ. ವಿಶ್ವೇಶ್ವರಯ್ಯ
5. ಬೆಂಗಳೂರು
6. ಅದಿತಿ
7. ಕುಮಾರವ್ಯಾಸ (ನಾರಣಪ್ಪ)
8. ದೇವವ್ರತ
9. ಶ್ರೀ ಕೃಷ್ಣದೇವರಾಯ
10. ಪತಂಜಲಿ

| ಉತ್ತರ ಸರಿಯಾದರೆ : | 9–10 ಅತ್ಯುತ್ತಮ | 7–8 ಉತ್ತಮ | 5–6 ಸಾಧಾರಣ |
|---|---|---|---|

# ಶಬ್ದ ಶೋಧ – 65

**ಉಮಾ ಎಂ.ಎಸ್.,** ಬನಶಂಕರಿ, ಬೆಂಗಳೂರು




**ಎಡದಿಂದ ಬಲಕ್ಕೆ**

1. ಎಂ.ವಿ. ವಿಶ್ವೇಶ್ವರಯ್ಯನವರ ಪೂರ್ವಿಕರ ಊರು 4
3. ಭದ್ರೆಗೆ ಕಬ್ಬಿಣ ತರಲು ಎಂ.ವಿ. ಹೋಗಿದ್ದು ಇಲ್ಲಿಗೆ 4
5. ಸಂಗೀತಕ್ಕೆ ಶೃತಿ ತಾಯಿ, ಇದು ತಂದೆ 2
6. ಈ ಬಿಡಲಾಗದ ಸ್ವಭಾವ ಒಳ್ಳೇದೂ ಅಥವಾ ಕೆಟ್ಟದ್ದೂ ಆಗಿರಬಹುದು 2
9. ನಾರಾಯಣಿಯ ದೇಗುಲವಿರುವುದು ಈ ಊರಲ್ಲಿ 3
10. ಹೋಳಿ ಹಬ್ಬಕ್ಕೂ, ಈ ಬಣ್ಣದ ಪುಡಿಗೂ ನಂಟು 3
13. ಕರ್ಣನ ಸಾಕು ತಾಯಿ 2
16. ಕಣಿವೆ 2
17. ಕೃಷ್ಣದೇವರಾಯನ ಅಮಾತ್ಯ 4
18. ಯಮನ ಮನೆಗೆ ನಿರ್ಭೀತನಾಗಿ ಹೋದ ಕುವರ 4

**ಮೇಲಿನಿಂದ ಕೆಳಗೆ**

1. ಶುರುವಿನಲ್ಲಿ ದೀರ್ಘವಾದ ಅಕ್ಬರ್‌ನ ವಂಶಸ್ಥರು 4
2. ನಾಡಗೀತೆಯಲ್ಲಿ ಜಕಣಾಚಾರಿಯಂತೆ ಮತ್ತೊಬ್ಬ ಶಿಲ್ಪಿ ಇದ್ದಾನೆ 3
3. ಹಲವು ಭಯೋತ್ಪಾದಕರ ಊರು. ರಾಜ್ಯದ ಒಂದು ಬಂದರು. 3
4. ಬೌದ್ಧರ ಧಾರ್ಮಿಕ ಗ್ರಂಥ 4
7. ಅಗರ್‌ತಲಾ ಈ ರಾಜ್ಯದ ರಾಜಧಾನಿ 3
8. ಈ ಹೂವು ಲಾಬಿ ಮಾಡಿದೆಯೇ 3
11. ರಭಸದಿಂದ ಬಿಟ್ಟ ಬಾಣದಂತೆ ಈ ನದಿ 4
12. ದೇವಲೋಕದಿಂದ ಬಂದ ಪುಷ್ಪ 4
14. ಸಾರ ಹಾಗೂ ರಸವುಳ್ಳ ತಾವರೆ 3
15. ಸತಿ ಸುಕನ್ಯೆಯ ಪತಿ 3

ಇನ್ನು ಉದ್ಯೋಗಸ್ಥ ಮಹಿಳೆಯರ ಪಾಡಂತೂ ಹೇಳತೀರದು. ಒಳ-ಹೊರಗೆ ದುಡಿಯುವ ಅವಳಿಗೆ ಪತಿಯ ನೆರವಿನ ಹಸ್ತ ಸಿಗುವ ಖಾತರಿಯಿರುವುದಿಲ್ಲ. ಮನೆಯ ಕೆಲಸ ಗಂಡು ಮಾಡುವುದುಂಟೆ ಎಂಬ ಅಹಮಿಕೆಯ ಭಾವ ಕೆಲವರಿಗೆ.

**ಯುವತಿಯರ ಜವಾಬ್ದಾರಿ :** ಮಹಿಳೆಯರ ಸ್ಥಾನಮಾನಗಳು ಒಂದು ಸಮಾಜದ ಆರೋಗ್ಯವನ್ನು ಬಿಂಬಿಸುತ್ತದೆ. ಸಮಾಜದ ಅರ್ಧಭಾಗವೇ ಅನಾರೋಗ್ಯದಿಂದ ಬಳಲಿದರೆ ಸಮಾಜ ಹೇಗೆ ಚೈತನ್ಯದಿಂದ ಸಂತೃಪ್ತಿಯಿಂದ ಇರಲು ಸಾಧ್ಯ? ಇದೀಗ ಗುರುತರವಾದ ಹೊಣೆ ಯುವತಿಯರ ಮೇಲಿದೆ. ಇನ್‌ಫೋಸಿಸ್ ಸುಧಾಮೂರ್ತಿಯವರು ಒಂದು ಸಂದರ್ಭದಲ್ಲಿ ಹೇಳಿರುವಂತೆ ಹುಡುಗಿಯರಿಗೆ ಆಕಾಶವೇ ಮಿತಿಯಾಗಬೇಕು.

# ಹೆಣ್ಣೆಂಬ ಅಭಿಮಾನವಿರಲಿ

(ಕಳೆದ ಸಂಚಿಕೆ ಯಿಂದ)

– ಶಾರದಾಮೂರ್ತಿ
ಮೈಕೋ ಬಡಾವಣೆ, ಬೆಂಗಳೂರು

ಧೈರ್ಯ, ಉತ್ಸಾಹ, ಆತ್ಮ ವಿಶ್ವಾಸ, ಛಲಗಳಿಂದ ನಮ್ಮ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳಬೇಕು. ಉತ್ತಮ ಶಿಕ್ಷಣ ಪಡೆದು ಮುಂದೆ ನಮ್ಮ ಕಾರ್ಯಕ್ಷೇತ್ರದಲ್ಲಿ ಯಶ ಸಾಧಿಸುವಂತಾಗಬೇಕು. ಮನೆಯಲ್ಲಿ ಹೆತ್ತವರಿಗೆ ಹೆಣ್ಣು ಅಭಿಮಾನದ ಸಂಕೇತವಾಗಬೇಕು.

ಯಾವುದೇ ಕಾರಣಕ್ಕೂ ವರದಕ್ಷಿಣೆಯನ್ನು ಬೆಂಬಲಿಸಬಾರದು. ಪ್ರತಿಭಟಿಸಬೇಕು. ಕೊಡುವವರಿದ್ದರೆ ತಾನೆ ತೆಗೆದುಕೊಳ್ಳುವುದು. ದೈಹಿಕವಾಗಿ, ಮಾನಸಿಕವಾಗಿ ಬಲಶಾಲಿಗಳಾದರೆ, ಮನಃಸ್ಥೈರ್ಯವನ್ನು ಬೆಳೆಸಿಕೊಂಡರೆ ದೈಹಿಕ ಶೋಷಣೆಯನ್ನು ತಡೆಗಟ್ಟಬಹುದು.

ವರದಕ್ಷಿಣೆಯ ಪಿಡುಗಿನ ವಿರುದ್ಧ ಸಿಡಿದೆದ್ದ ಯುವತಿಯ ಕುರಿತು ಒಂದು ಕವನ

## ಭರವಸೆಯ ಹಾದಿಯಲಿ

ಅಂಗೈಯಲ್ಲಿಟ್ಟು ಸಾಕಿದ ಅರಗಿಣಿಗೆ
ಮಾರುಕಟ್ಟೆಯಲ್ಲಿ ವರ ಸಿದ್ಧ
ಧನ, ಕನಕ, ವಸ್ತು, ವಾಹನ
ಅಮ್ಮನಾಣತಿಗವ ಸಂಪೂರ್ಣ ಬದ್ಧ

ಕೊರಳಿಗುರುಳಾದ ತಾಳಿ
ಕೊರಗಿದರೂ ಕರಗದಿಹ ರಕ್ಕಸರ ಚಾಳಿ
ಅರಗಿಣಿಗೆ ಗಿಡುಗಗಳ ಕಾಟ
ಸಂಬಳವ ಬಾಚಿ ಬಂಗಲೆಗೂ ಹೂಟ



ಹೊಂಗನಸು ಕರಗಿ, ಕಂಬನಿಯು ಉಕ್ಕಿ
ಹೊಕ್ಕ ಮನೆಯಲ್ಲಿ ಬಿಕ್ಕಿತ್ತು ಹಕ್ಕಿ
ಕೊನೆಗೂ ಸಿಡಿದ ಆತ್ಮಾಭಿಮಾನದ ಕಿಡಿ
ಹೊಸ ಅಧ್ಯಾಯಕೆ ಮುನ್ನುಡಿ

ಬದಲಾದಳು ಹುಡುಗಿ
ಗುಡುಗಿದರು ಮನೆಮಂದಿ
ಅಡಿಗೆ ಅನಿಲಕ್ಕೆ ಬಲಿಯಾಗಿಸಲು
ದುಷ್ಟ ಮನಗಳ ಪಿತೂರಿ
ಎಚ್ಚೆತ್ತು ಪಾರಾದಳು ನಾರಿ

ಕ್ರೂರಿಗಳಿಗೆ ಕಾರಾಗೃಹದ ದಾರಿ
ಅನ್ಯಾಯ ಎದುರಿಸುವ ಛಲ
ಮಿಗಿಲಾದ ಮನೋಬಲ
ದಿಟ್ಟತನಕೆ ಸಂದ ಜಯ
ಪ್ರಪಂಚ ಬಲು ವಿಶಾಲ

ಭರವಸೆಯ ಹಾದಿಯಲಿ
ಸ್ವಪ್ನಗಳು ಸಾಕಾರ

ಶೋಷಿತರ ದನಿಯಾದಳು ತರುಣಿ
"ಕ್ರೌರ್ಯ ಖಂಡಿಸಿ ಪ್ರೀತಿ ಬಯಸುವೆವು ನಾವು
ಆತ್ಮರಕ್ಷಣೆ ಅರಿತು ಸಬಲರಾಗಿಹೆವು
ನಮಗಿಹುದು ಕಾನೂನು ನೆರವು

ಅಂತೆ ತಾಯಂದಿರಿಗುಂಟು ಕಿವಿಮಾತು
ಕೊಳ್ಳದಿರಿ ಗಂಡುಗಳ ರಾಶಿಹಣದಿಂದ
ಮನೆ-ಮನಗಳ ನಡುವಿರಲಿ
ಸುಮಧುರ ಸಂಬಂಧ

**ಹೀಗೆ ದಿಟ್ಟತನದಿಂದ ಅನ್ಯಾಯವನ್ನು ಖಂಡಿಸಬೇಕು.**

ರಾಜಕೀಯದಲ್ಲಿಯೂ 33% ಮೀಸಲಾತಿ ಮಹಿಳೆಯರಿಗೆ ಸಿಗುವಂತೆ ಸಂಘಟಿತ ದನಿಯೆತ್ತಬೇಕು. ಭ್ರಷ್ಟಾಚಾರದ ಪಿಡುಗನ್ನು ತೊಡೆಯಲು ಮಹಿಳೆಯರೇ ಸಮರ್ಥರು. "ಸ್ತ್ರೀಯು ದೇವತೆಯೆಂದೆನಿಸಿ ಎಲ್ಲರಿಂದಲೂ ಪೂಜಿಸಲ್ಪಡುವುದು ಸರಿಯಲ್ಲ. ಚರಣದಾಸಿಯೆಂದು ತುಳಿತಕ್ಕೆ ಒಳಗಾಗುವುದೂ ಸರಿಯಲ್ಲ. ಸ್ತ್ರೀ-ಪುರುಷರ ನೈಸರ್ಗಿಕ. ಉದಾತ್ತ ಗುಣಗಳ ಸಮನ್ವಯದಲ್ಲಿಯೇ ಮಾನವನ ಪೂರ್ಣತೆ ಅಡಗಿದೆ. ಆದುದರಿಂದ ಸ್ತ್ರೀಯರು ರಾಷ್ಟ್ರಕಾರ್ಯದ ತಮ್ಮ ಅರ್ಧ ಜವಾಬ್ದಾರಿಯನ್ನು ನಿರ್ವಹಿಸಿ "ಸಹಧರ್ಮಚಾರಿಣಿ" ಎಂಬ ಅನ್ವರ್ಥನಾಮವನ್ನು

ಸಾರ್ಥಕಗೊಳಿಸಬೇಕು. ವಂದನೀಯ ಲಕ್ಷ್ಮೀಬಾಯಿ ಕೇಳ್ಕರರ ಈ ಮಾತುಗಳು ಅರ್ಥಪೂರ್ಣವೆನಿಸುತ್ತವೆ. ಹೆಣ್ಣು ಕೇವಲ ಸೌಂದರ್ಯದ ಪ್ರತೀಕವಲ್ಲ. ಬೌದ್ಧಿಕವಾಗಿಯೂ, ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಉನ್ನತಿಯನ್ನು ಸಾಧಿಸಿದ್ದಾಳೆ.

ಹಾಗೆಯೇ ನಮ್ಮ ನಾಡಿನ ಸಂಸ್ಕೃತಿ, ಸಂಪ್ರದಾಯಗಳು ಉಳಿದಿರುವುದು ಮಹಿಳೆಯರಿಂದ ಎಂದು ಅಭಿಮಾನದಿಂದ ಹೇಳಿದ ರಾಜೀವಗಾಂಧಿಯವರ ಮಾತು ಸತ್ಯವಾದುದು.

"ಮನೆಯೆ ಮೊದಲ ಪಾಠ ಶಾಲೆ, ಜನನಿ ತಾನೆ ಮೊದಲ ಗುರುವು" ಎಂಬಂತೆ ಮಕ್ಕಳಿಗೆ ಆಕೆ ಕೊಡುವ ಉತ್ತಮ ಸಂಸ್ಕಾರದ ಶಿಕ್ಷಣ ಅವರನ್ನು ಸತ್ಪ್ರಜೆಗಳನ್ನಾಗಿ ರೂಪಿಸುತ್ತದೆ. ರಾಷ್ಟ್ರದ ವರ್ತಮಾನ ಹಾಗೂ ಭವಿಷ್ಯದ ರೂವಾರಿ ಹೆಣ್ಣು.

ಮನೆಗೆ, ಸಮಾಜಕ್ಕೆ, ರಾಷ್ಟ್ರಕ್ಕೆ, ವಿಶ್ವಕ್ಕೆ ದುಡಿಯುವ ಆಕೆಯ ತ್ಯಾಗಕ್ಕೆ, ಶ್ರಮಕ್ಕೆ, ಸಹನೆಗೆ ಎಣೆಯಿಲ್ಲ.

ಈಗೀಗ ಅನಾಥ ಹೆಣ್ಣು ಶಿಶುಗಳನ್ನು ದತ್ತು ತೆಗೆದುಕೊಂಡು ತಾಯಿಯ ಶುದ್ಧ ಪ್ರೀತಿ, ಮಮತೆ ಕೊಡುವ ಯುವತಿಯರ ಸಂಖ್ಯೆ ಹೆಚ್ಚುತ್ತದೆ. ಮನೆಗೆ ಬಂದ ಕಂದನನ್ನು ತಾವು ಹೆತ್ತ ಕಂದನೊಂದಿಗೆ ಮುತುವರ್ಜಿಯಿಂದ, ವಾತ್ಸಲ್ಯದಿಂದ ನೋಡಿಕೊಳ್ಳುತ್ತಿರುವುದು ಒಳ್ಳೆಯ ಬೆಳವಣಿಗೆ. ಯುವ ಜನಾಂಗ ಸರಿಯಾದ ದಿಕ್ಕಿನತ್ತ ಸಾಗುತ್ತಿದೆ.

**ಶುಭಾಕಾಂಕ್ಷೆ :** ಹೆಣ್ಣಾಗಿ ಹುಟ್ಟಿರುವ ಭಾಗ್ಯವಂತರು ನಾವಾಗಿರುವಾಗ ನಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳೋಣ. ಜಗವೇ ವಿಸ್ಮಯದಿಂದ ನಮ್ಮತ್ತ ದಿಟ್ಟಿಸುವಂತೆ ಬಾಳೋಣ... ಅಲ್ಲವೆ?

**ಮುಂದೆ ಬರುವುದು ಕಾಲ**
**ನಾರಿಯರ ಶ್ರಮದ ಫಲ**
**ಅಂತರದ ತೆರೆ ದೂರ**
**ಸಂಘಟಿತ ಶಕ್ತಿ, ಬಲ**
**ಮಂಗಳವು ರಾಷ್ಟ್ರಕ್ಕೆ ಶುಭಮಂಗಳ**
**ಇಡಿಯ ವಿಶ್ವಕ್ಕೆ ಶುಭಮಂಗಳ**





ಗೀತಾ ಅಭಿಯಾನ ಪೂರ್ವಭಾವಿ ಕಾರ್ಯಕ್ರಮ



ಪೂಜ್ಯ ಸ್ವರ್ಣವಲ್ಲಿ ಶ್ರೀಗಳು



ಕಬ್ಬನ್‌ಪೇಟೆ ಬೆಂಗಳೂರು
ಪ್ರಖಂಡ ವಾರ್ಷಿಕೋತ್ಸವ
ಪೂಜ್ಯ ಸಂತೋಷ ಗುರೂಜಿಯವರೊಂದಿಗೆ
(ಪುಟ 30)



ಶ್ರೀ ಡಿ. ಗೋಪಾಲರಾವ್
ಅವರಿಗೆ ಸ್ವಾತಂತ್ರ್ಯೋತ್ಸವ ಸನ್ಮಾನ
ಚನ್ನರಾಯಪಟ್ಟಣ
(ವರದಿ ಪುಟ 29)



ಬೆಂಗಳೂರು ಮಹಾನಗರ ಅಧ್ಯಕ್ಷ
ಶ್ರೀ ವಿಜಯಕುಮಾರರೆಡ್ಡಿಯವರಿಗೆ ಸನ್ಮಾನ
ಸಂತಸ ಹಂಚಿಕೊಳ್ಳುತ್ತಿರುವ ದಂಪತಿಗಳು



ದೇವನಹಳ್ಳಿ ಬೆಂಗಳೂರು ಗ್ರಾಮಾಂತರ ಪ್ರಖಂಡ
ಅಭ್ಯಾಸ ವರ್ಗ (ಪುಟ 28)

Regd. No. CPMG/KA/BGS/636-2009-11 Total Pages 4
Post at G.P.O. Bangalore ON 5TH OF EVERY MONTH RNI No. KARKAN/2002/808






ವಿಶ್ವ ಹಿಂದು ಪರಿಷದ್ ಸ್ಥಾಪನಾ ದಿನಾಚರಣೆ - ಕೃಷ್ಣ ಜನ್ಮಾಷ್ಟಮಿ (ಜಾಲಹಳ್ಳಿ, ಸಂಪಂಗಿರಾಮನಗರ, ಬೆಂಗಳೂರು)

ಇಂದ
**ಹಿಂದುವಾಣಿ**
'ಧರ್ಮಶ್ರೀ', 91, ಶಂಕರಪುರಂ, ಬೆಂಗಳೂರು - 560 004

ಹಿಂದುವಾಣಿ

Printed & published by Sri Ramesh M. Parande, Edited by Sri T.A.P. Shenoy on behalf of Vishwa Hindu Parishad, Dharmashree, 91, Shankarapura, Bangalore - 4 Printed at Vishwasprints, Chamarajpet, Bangalore - 18 Ph: 080-26606088, 26604835